5-30 P.M.

We should necessarily follow. This is my submission. Therefore, the last two sentences:

> "Portions of personal explanation held to be objectionable have been expunged. Words, phrases and expressions which are not in the statement approved by the Speaker, if spoken, do not form part of the proceedings of the House."

So these are the parameters within which a personal explanation has to be made. I am sorry that the hon. Member Sri Moily did not have time to go through the entire matter relating to this as contained in Kaul & Shakdhar. I am not trying to take away Opposition Members' right. All I am trying to submit to the speaker is what has been followed in the Lok Sabha. Though the rule is silent in so many other aspects which have come up now, are found in Kaul and Shakdhar. We have to consider, as a matter of follow-up action, what your Office yesterday has issued in the form of a Bulletin. I will seek your permission to read out it.

Sub.- **Personal explanation by the Members in the House- Directions by the Speaker-procedure regarding.**

"Attention of the Hon'ble Members in invited to rule 315 of the Rules of Procedure and Conduct of the Business in the Legislative Assembly which provides for making a personal explanation by a Member in the House. In this connection, the Hon'ble Speaker has laid down the following procedure to be followed by the Members while making personal explanation under the said rule;

"Members against whom comments or criticisms of a personal nature are made on the floor of the House are entitled to make with the consent of the Speaker, a personal explanation. Such statement shall be brief and concise and shall not introduce any controversial or debatable matter.

"When the Member is present in the House at the time the allegations are made against him, he will be permitted to make a statement by way of personal explanation at the end of the speech of the Member/Minister who made the allegations.

"When the Member is not present in the House at the time the allegations are made and desiring to avail the provision shall make a written request to the Speaker enclosing a copy of the statement of personal explanation

proposed to be made by him. He will be allowed to make a statement later on. On permission being granted by the Speaker, the Member may make the statement soon after Question Hour and before the Business for the day is entered upon."

Sir, now formally my points are these. Firstly, you should permit the hon. Leader of Opposition to make a personal statement. It is only with your consent that a personal explanation can be made. Secondly, this should have been done at the earliest point of time. Thirdly, if the Hon. Leader of Opposition wishes to make a statement, a written copy of the personal explanation should be sent to you in advance for your perusal and in fact it is enjoined on you that you should go through the statement that is given to you in writting and see that objectionable and debatable portions are removed from it. Then only the Member will be permitted to make a personal statement. Lastly, the personal statement, if any, on your permission to be made is only before the regular business for the day starts i.e., after the Question Hour. All these points should be kept in mind. My submission is, none of the conditions that I have brought to your notice is fulfilled. Therefore, my submission is that the hon. Leader of Opposition should not be permitted to make a personal explanation today at this point of time.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೇ, ಸಂಸದೀಯ ಸಚಿವರು ಒಂದು ವಿಧಿ ಬಿಂದುವನ್ನು ಎತ್ತಿದ್ದಾರೆ. ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಒಂದು ವೈಯಕ್ತಿಕವಾದಂಥ ಹೇಳಿಕೆಯನ್ನು ಕೊಡಬೇಕೆಂದು ಹೇಳಿ ತಮಗೊಂದು ಕಾಗದವನ್ನು ಬರೆದಿದ್ದಾರೆ, ಅದರ ಪ್ರಕಾರ ತಮ್ಮ ಛೇಬರ್‌ನಲ್ಲಿ ಕೂಡಾ ಮಾತನಾಡಿದ್ದಾರೆ ಇಲ್ಲಿ ಅದನ್ನು ಪ್ರಸ್ತಾಪ ಮಾಡಬೇಕು ಎಂದು ಹೇಳಿ ಎದ್ದಾಗ ನಾವು ಏನು ತಿಳಿದುಕೊಂಡಿದ್ದೇವೆ ಎಂದರೆ ತಾವು ವಿರೋಧ ಪಕ್ಷದ ನಾಯಕರಿಗೆ ಅಪ್ಪಣೆ ಕೊಡಿಸಿದ್ದೀರಿ ಎಂದು ಹೇಳಿ ನಾವು ಸದನದಲ್ಲಿ ಅಭಿಪ್ರಾಯವನ್ನು ಕೊಡಬೇಕು ಎಂದು ಇದ್ದೆವು. ನಾವು ಎದ್ದು ನಿಂತಿದ್ದೇವೆ ಎಂದರೆ ತಮ್ಮ ಅಪ್ಪಣೆ ಕೊಟ್ಟಿದ್ದೀರಿ ಎಂದು ಹೇಳಿ ನಾವು ಎದ್ದು ನಿಂತಿರುತ್ತೇವೆ. ಎದ್ದು ನಿಂತ ಕೂಡಲೇ ಹೇಳಿಕೆಯನ್ನು ಪ್ರಾರಂಭ ಮಾಡಿದ್ದಾರೆ. ಎರಡು ಮೂರು ವಾಕ್ಯವನ್ನೂ ಕೂಡಾ ಹೇಳಿದ್ದಾರೆ. ಆದರಿಂದ ತಾವು ಅಪ್ಪಣೆ ಕೊಟ್ಟಿದ್ದೀರಿ ಎಂದು ಹೇಳಿ ಭಾವನೆ ಮಾಡಿಕೊಂಡಿದ್ದೇವೆ. ಇದು ಒಂದು ಭಾಗ. ಹೇಳಿಕೆಯನ್ನು ಕೊಡಲಿಕ್ಕೆ ಹೋದಾಗ ಮತ್ತು ಮುಂದೂ ವರೆಸಿಕೊಂಡು ಹೋದಾಗ ಈ ವಿಧಿಬಿಂದುವನ್ನು ಮಾನ್ಯ ಸಂಸದೀಯ ಸಚಿವರು ಎತ್ತಿದ್ದಾರೆ. ಆದ್ದರಿಂದ ಅದಕ್ಕೂ ಅಪ್ಪಣೆಯನ್ನು ತಾವು ಕೊಟ್ಟಿದ್ದೀರಿ ಎಂದು ನನ್ನ ಭಾವನೆ. ಅಪ್ಪಣೆ ಕೊಡಿಸಿದ ಮೇಲೆ ತಾವು ತಮ್ಮ ಅಭಿಪ್ರಾಯವನ್ನು ಈ ರೀತಿ ಮಧ್ಯೆ ಬದಲಾವಣೆ ಮಾಡುತ್ತೀರಿ ಎಂದು ಹೇಳಿ ನಾವು ಅಭಿಪ್ರಾಯಪಡುವುದಿಲ್ಲ. ಏಕೆಂದು ಹೇಳಿದರೆ ಒಮ್ಮೆ ಅಪ್ಪಣೆ ಕೊಟ್ಟಮೇಲೆ ಸಾಧಾರಣವಾಗಿ ಅದನ್ನು ಹಿಂತೆಗೆದುಕೊಳ್ಳತಕ್ಕಂಥ ಒಂದು ಪರಿಪಾಠ ಈ ಸದನದಲ್ಲಿ.....

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ.—ವಿಧಿಬಿಂದುವಿನಲ್ಲಿ ಸಾಕಷ್ಟು ಭಾಗಗಳು ಇವೆ. ಇಲ್ಲಿ ಸನ್ಮಾನ್ಯ ವಿರೋಧ ಪಕ್ಷದ ನಾಯಕರು ನೇರವಾಗಿ ಬಂದು ಇಲ್ಲಿ ಒಂದು ವಿಚಾರವನ್ನು ಎತ್ತಿದಾಗ ತಮಗೆ ಗೊತ್ತಿಲ್ಲದೇ ಇರಬಹುದು. ಆ ವಿಚಾರವನ್ನು ನನಗೆ ಗೊತ್ತಿರಲಿಲ್ಲ ಎಂದು ತಾವು ಹೇಳಬಹುದು. ಆ ಪ್ರಶ್ನೆ

ಇಲ್ಲ. ತಮಗೆ ಪತ್ರ ಬರೆದಿದ್ದಾರೆ. ಆ ಪತ್ರ ಬಂದಮೇಲೆ ತಮ್ಮ ಛೇಂಬರಿಗೆ ಬಂದು ಮಾತನಾಡಿದ್ದಾರೆ, ಮಾತನಾಡಲಿಕ್ಕೆ ಇಲ್ಲಿ ಇವರ ಹೆಸರನ್ನು ಕರೆಯಲಿಲ್ಲ ತಾವು. ಇಲ್ಲಿ ಅರ್ಬನ್ ಡೆವಲಪ್‌ಮೆಂಟ್ ಮೇಲೆ ಚರ್ಚೆ ನಡೆಯುತ್ತಿರುವಾಗ ಅವರಿಗೆ ಮಾತನಾಡಬೇಕು ಎಂದು ಸಹ ಕರೆಯಲಿಲ್ಲ. ಅವರು ಎದ್ದು ನಿಂತ ಮೇಲೆ ತಾವು ಅಪ್ಪಣೆಯನ್ನು ಕೊಡಿಸಿದ್ದೀರಿ ಎಂದು ಲೆಕ್ಕ ಬರುತ್ತದೆ. ಈಗ ತಾವು ತಮ್ಮ ಅಭಿಪ್ರಾಯವನ್ನು ಬದಲಾವಣೆ ಮಾಡುವ ಹಾಗಿದ್ದರೆ, ಆ ಮಾತು ಬೇರೆ. ಆ ಭಾಗ ಏಕೆಂದು ಹೇಳಿದರೆ ಹೇಳಿಕೆಯನ್ನು ದಯಮಾಡಿ ತಾವು ನೋಡಬೇಕು. ಮಾತು ಎಂದರೆ ಒಂದು ಮುತ್ತು ಇದ್ದ ಹಾಗೆ. ಅದು ಉದುರಿ ನೆಲಕ್ಕೆ ಬೀಳಲಿಕ್ಕೆ ಬಿಡಬಾರದು. ಇಂಥ ಗಂಭೀರ ವಿಷಯದ ಬಗ್ಗೆ ತಾವು ವಿಚಾರ ಮಾಡಬೇಕು.

ಅಧ್ಯಕ್ಷರು.—ನಿಮಗೆ ಅವಕಾಶ ಕೊಡಬಾರದು ಎಂದಲ್ಲ. ರೂಲ್ಸ್ ಪ್ರಕಾರ ಇಷ್ಟೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ತಮಗೆ ಆ ಅಭಿಪ್ರಾಯ ಇಲ್ಲ. ಆದ್ದರಿಂದ ಈ ವಿಚಾರ ಒಂದನೆಯ ಭಾಗ. ಸನ್ಮಾನ್ಯ ವಿರೋಧ ಪಕ್ಷದ ನಾಯಕರು ತಮಗೆ ಪತ್ರ ಬರೆದಿದ್ದಾರೆ. ಪರ್ಸನಲ್ ಹೇಳಿಕೆಯನ್ನು ಕೊಡುತ್ತೇನೆ ಎಂದು ಹೇಳಿದ್ದಾರೆ. ತಮ್ಮ ಛೇಂಬರ್‌ಗೆ ಹೋಗಿದ್ದಾರೆ, ಮನದಟ್ಟು ಮಾಡಿದ್ದಾರೆ. ಹೇಳಿಕೆಯನ್ನು ಕೊಡಬಹುದಾ ಎಂದು ತಾವು ಹೇಳಿದ್ದೀರಿ. ಮೂರನೆಯ ಭಾಗ ಅವರು ಎಂದು ನಿಂತಿದ್ದಾರೆ. ಎದ್ದು ನಿಂತಮೇಲೆ ಪರ್ಸನಲ್ ಹೇಳಿಕೆಯನ್ನು ಕೊಡಂತ್ತೀರಾ ಎಂದು ತಾವು ಕೇಳಿದ್ದೀರಿ. ಇದೆಲ್ಲಾ ಓಟಿಟ್ಟಿ ತಾತ್ಪರ್ಯ.

ತಾವು ವಿರೋಧ ಪಕ್ಷದ ನಾಯಕರಿಗೆ ಅವರು ಪರ್ಸನಲ್ ಎಕ್ಸ್‌ಪ್ಲನೇಷನ್ ಮಾಡುವುದಕ್ಕೆ ಅಪ್ಪಣೆ ಕೊಟ್ಟಿದ್ದೀರಿ.

ಅಧ್ಯಕ್ಷರು.—ನಾನು ಅಪ್ಪಣೆ ಕೊಟ್ಟಿದ್ದೆನು ಅಂದಲ್ಲ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಅದು ತಮ್ಮ ಅಭಿಪ್ರಾಯ. ನಮ್ಮದು ಸಬ್‌ಮಿಷನ್ ಏನೆಂದರೆ ನನ್ನ ಕಣ್ಣಮುಂದೆ ಏನು ನಡೆಯಿತು ಅದನ್ನು ಹೇಳಿದ್ದೇನೆ ಇದರಲ್ಲಿ ನನ್ನದು ಉತ್ಪ್ರೇಕ್ಷೆಯೂ ಇಲ್ಲ, ಸೇರಿಸಿಯೂ ಇಲ್ಲ. ವಾಸ್ತವಿಕವಾಗಿ ನಡೆದದ್ದನ್ನು ಹೇಳಿದ್ದೇನೆ. ಕೊನೆಗೆ ತಮಗೆ ಬಿಟ್ಟಿದ್ದು.

ಇನ್ನು ವೈಯಂಕ್ತಿಕ ಹೇಳಿಕೆಗೆ ಅವಕಾಶ ಕೊಡಲು ರೂಲ್ ಇದೆ. ಇದನ್ನು ಸಂಸದೀಯ ಸಚಿವರೂ ತಮ್ಮ ಅಭಿಪ್ರಾಯದಲ್ಲಿ ಹೇಳಿದ್ದಾರೆ, ಕೌಲ್ ಅಂಡ್ ಶಕ್ದರ್ ಏನಿದೆ ಅದರಿಂದ ನಮ್ಮ ಸಂಸದೀಯ ನಡುವಳಿಕೆಯನ್ನು ನಡೆಸಲು ಅನುಕೂಲವಾಗುತ್ತದೆ. ಇದು ನಮಗೆ ಬೈಬಲ್ ಇದ್ದ ಹಾಗೆ, ಗೀತೆ, ಖುರಾನ್ ಇದ್ದ ಹಾಗೆ. ನಾನು ಹೇಳುವುದೇನೆಂದರೆ ಪರ್ಸನಲ್ ಎಕ್ಸ್‌ಪ್ಲನೇಷನ್ ಎಂದು ಇಡೀ ಚಾಪ್ಟರನ್ನೇ ಓದಿಬಿಟ್ಟಿದ್ದಾರೆ. ಇರಲಿ. ನಮ್ಮದು ಒಂದು ರೂಲ್ ಇದೆ. ಅಧ್ಯಕ್ಷರೇ, ತಮಗೆ ಗೊತ್ತಿದೆ ನಮ್ಮ ಕರ್ನಾಟಕ ವಿಧಾನಸಭೆಯ ನಿಯಮಗಳ ಪ್ರಕಾರ ನಾವು ಚರ್ಚೆಯಲ್ಲಿ ಭಾಗವಹಿಸಬಹುದು. ಈಗಿರುವ ರೂಲನ್ನು ನಾವು ಅನುಷ್ಠಾನಕ್ಕೆ ತರುತ್ತಿದ್ದೇವೆ. ಸಂದರ್ಭವಂತ್ತು ಅನುಭವಗಳ ಪರಂಪರೆಗಳು ಅಥವಾ ಅಪೇಕ್ಷೆಗಳು ಇದ್ದ ಹಾಗೆ ಈ ರೂಲ್‌ಗಳನ್ನು ತಿದ್ದುಪಡಿ ಕೂಡ ಮಾಡಿದ್ದೇವೆ. ಅನೇಕ ಸಂದರ್ಭಗಳಲ್ಲಿ ಸಂದಿಗ್ಧತೆಗಳೂ ಬರುತ್ತವೆ. ಅನೇಕ ಸಂಕಷ್ಟಗಳು ಬರುತ್ತವೆ. ಕೆಲವು ಸಲ ಈ ಸದನದಲ್ಲಿ ಸದ್ಭಾವನೆಗಳು ಸಂಘರ್ಷಣೆಯೂ ಆದದ್ದಿದೆ. ಅಂಥ ಅಡೆತಡೆ ಬಂದಾಗಲೆಲ್ಲ ಈ ರೂಲ್‌ಗಳನ್ನು ಕೂಡ ಬದಲಾವಣೆ ಮಾಡಿದ್ದೇವೆ.

ಈಚಿನ ಎರಡು ಮೂರು ವರ್ಷಗಳ ಹಿಂದೆ ಕೂಡ ರೂಲ್ಸನ್ನು ಬದಲಾವಣೆ ಮಾಡಿ ಪರಿಪ್ಯರಿಸಿದ್ದೇವೆ. ಈಗ ಹಿಂಜೆನೇ ರೂಲ್ಸ್ ಸಾಕಷ್ಟು ಸಮಯದಿಂದ ಯಾವ ಫಾರ್ಮ್‌ನಲ್ಲಿದೆಯೋ ಅದೇ ಫಾರ್ಮನಲ್ಲಿದೆ ಎಂಬುದನ್ನು ತಾವು ದಯವಿಟ್ಟು ಗಮನಿಸಬೇಕು. ಬದಲಾವಣೆಯೇ ಆಗಿಲ್ಲ. ಒಂದು ವೇಳೆ ಇಂಥ ಪರ್ಸನಲ್ ಎಕ್ಸ್‌ಪ್ಲನೇಷನ್ ಬಗ್ಗೆ ಇರುವ ಈ ರೂಲನ್ನು ಮಾನ್ಯ ಸಂಸದೀಯ ಸಚಿವರು ತಮ್ಮ ಸುದೀರ್ಘ ಭಾಷಣದಲ್ಲಿ ಪದೇ ಪದೇ ಪ್ರಸ್ತಾಪಿಸದೇ ಇರದಿದ್ದರೆ ಇದನ್ನು ಬದಲಾಯಿಸ ಬೇಕೆನ್ನುವುದು ಈ ಸದನಕ್ಕೆ ಹೊಳೆಯುತ್ತಲೇ ಇರಲಿಲ್ಲ. ಇದುವರೆಗೂ ಆ ಸಂದರ್ಭ ಬಂದಿರಲೇ ಇಲ್ಲ. ಒಂದು ಪರ್ಸನಲ್ ಎಕ್ಸ್‌ಪ್ಲನೇಷನ್ ಬಗ್ಗೆ ಇರುವ ರೂಲ್ ಬಗ್ಗೆ ಒಂದು ದೊಡ್ಡ ವ್ಯಾಖ್ಯಾನ ಮಾಡತಕ್ಕಂಥ ಒಬ್ಬ ಸಂಸದೀಯ ಸಚಿವರು ಈ ಕರ್ನಾಟಕದಲ್ಲಿ ಹಿಂದೆ ಬಂದಿದ್ದಿಲ್ಲ, ಇವತ್ತು ಬಂದಿದ್ದಾರೆ. ವಿಶೇಷವಾದ ಘಟನೆ ಇದು. ತಾವು ಇದನ್ನು ಮಾರ್ಕ್ ಮಾಡಬೇಕು.

(ನಗು)

ಈ ೩೧೫ನೇ ರೂಲ್ ವೆರಿ ಸಿಂಪಲ್ ಆಗಿದೆ. ಏಕೆಂದರೆ ಸಂಸತ್ತಿನಲ್ಲಿ ಏನಾಗಿದೆ ಎಂಬುದಕ್ಕೆಲ್ಲ ಆಮೇಲೆ ಬರುತ್ತೇನೆ. ತಮಗೆ ಗೈಡ್ ಮಾಡುವುದು ನಮ್ಮ ಮುಂದಿರುವ ಕರ್ನಾಟಕ ವಿಧಾನಸಭೆಯ ವಿಧಿ ನಿಯಾಮಾವಳಿಗಳು. ಪಾರ್ಲಿಮೆಂಟ್ ವಿಧಿ ನಿಯಾಮಾವಳಿಗಳಲ್ಲ. ಪ್ರತ್ಯಕ್ಷವಾಗಿ ಪರೋಕ್ಷವಾಗಿ ತಮ್ಮನ್ನು ಗೈಡ್ ಮಾಡುವುದು ಇಲ್ಲಿಯದೇ. ಮೊದಲು ಅದನ್ನು ಅವರು ಓದಲಿಲ್ಲ. ಎಲ್ಲ ಓದಿದರು. ಕುಂಭಕರ್ಣ ಎಲ್ಲ ಕಡೆ ಪ್ರದಕ್ಷಿಣೆ ಮಾಡಿದ, ಆದರೆ ತನ್ನ ಮನೆಯಲ್ಲಿದ್ದ ತುಳಸೀಕಟ್ಟೆಯನ್ನು ಪ್ರದಕ್ಷಿಣೆ ಮಾಡುವುದನ್ನು ಮರೆತ ಎಂಬಂತೆ. ಕಾಶೀ, ಹರಿದ್ವಾರ, ಬದರೀನಾಥ ಎಲ್ಲ ಕಡೆ ಹೋಗಿ ಬಂದರೂ ತನ್ನ ಮನೆಯಂದನ್ನು ಅವನು ಮರೆತ. ಈಗ ನಿಯಮ ೩೧೫ ಅನ್ನು ನಾನು ಓದುತ್ತೇನೆ.

> "A member may, with the permission of the Speaker make a personal explanation although there is no question before the House, but in this case no debatable matter may be brought forward, and no debate shall a rise."

The only requisit erequirement for a Member to raiseit is to seek the permission of the Speaker. ಈಗ ಪರ್ಸನಲ್ ಎಕ್ಸ್‌ಪ್ಲನೇಷನ್ ಬಗ್ಗೆ ಕಾನೂನು ಇಲ್ಲ ಎಂದು ತಾವು ಹೇಳುವುದಾದರೆ ನಾನು ಕುಳಿತುಕೊಳ್ಳುತ್ತೇನೆ. ಈಗ ಪ್ರೋಸೆಸ್ ನಡೆಯಬೇಕಿದೆ. He has to seek the permission of the Chair. ಏಕೆಂದರೆ ಮಧ್ಯದಲ್ಲಿ ಇಂಟರ್‌ವೀನ್ ಮಾಡಬೇಕಾಗುತ್ತದೆ. ಎಲ್ಲ ರೂಲ್ ಪ್ರಕಾರವೇ ನಡೆಯಬೇಕಲ್ಲವೇ ? ಮಧ್ಯದಲ್ಲಿ ನಿಯಮ ೩೧೫ರ ಪ್ರಕಾರ ಅನುವಂತಿ ಕೊಡಬೇಕಾದರೆ He has got to seek your permission to stop the other proceedings. He sought. Explanation ಕೇಳುತ್ತೇನೆ. ಅದನ್ನು ಕೊಡಬೇಕೆಂದು ರೂಲ್‌ನಲ್ಲಿ ಹಾಕಿಲ್ಲ. What kind of a Statement has to make, whether it is to be approved or not etc,, is not mentioned in Rule 315. ಅದನ್ನು ಇಲ್ಲಿ ಹೇಳಿಲ್ಲ. ಒಂದು ವೇಳೆ ಅಂಥ ಪ್ರಸಂಗಗಳು, ಅಂಥ ಘಟನೆಗಳು ಈಥರಾನೇ ಕೇಳಬೇಕು, ಪಾರ್ಲಿಮೆಂಟಿನಲ್ಲಿ ಇಂಥಾ ರೂಲ್ಸ್ ಇದೇ, ಅದರ ಪ್ರಕಾರವೇ ಇಲ್ಲೂ ವಾದ ಮಾಡಬೇಕು ಎಂದು ಆದರೆ ನೀವೀವೇಳೆಗೆ ಇದರೊಳಗೆ ಅದನ್ನು ಇನ್‌ಕಾರ್ಪೊರೇಟ್ ಮಾಡಿರುತ್ತಿದ್ದಿರಿ. ಅದನ್ನು ಮಾಡಿಲ್ಲ. ಇದು ನಮ್ಮ ಮುಂದಿರುವ ರೂಲ್. ಆದರೆ ಪ್ರಕಾರ ಯಾರು ಕೊಡತಕ್ಕಂಥ ಹೇಳಿಕೆಯ ಪೂರ್ತಿ ಪಾಠ ಒಪ್ಪಿಸಬೇಕೆಂಬ ಅಗತ್ಯವಿಲ್ಲ ಎಂಬುದನ್ನು ೩೧೫ನೇ ರೂಲು ಸ್ಪಷ್ಟವಾಗಿ ತಿಳಿಸುತ್ತದೆ.

ಎರಡನೆಯ ಅಂಶ ಏನೆಂದರೆ ಇಲ್ಲಿ ಏನು ಪರಂಪರೆ ಇದೆ ಎಂಬುವ ಪ್ರಶ್ನೆ ಮುಖ್ಯ. ದಯವಿಟ್ಟು ತಾವು ರೆಕಾರ್ಡ್‌ನ್ನು ತರಿಸಿನೋಡಿ. ಯಾರು ಪರ್ಸನಲ್ ಎಕ್ಸ್‌ಪ್ಲನೇಷನ್ ಇತ್ತೀಚೆಗೆಲ್ಲ ಕೊಟ್ಟಿದ್ದಾರೆ ಅದನ್ನು ನೋಡಿ. ಮಾನ್ಯ ವೈ. ಕೆ. ರಾಮಯ್ಯನವರು ಪರ್ಸನಲ್ ಎಕ್ಸ್‌ಪ್ಲನೇಷನ್ ಕೊಡಬೇಕೆಂದು ಎದ್ದು ನಿಂತರು. ಅವರಿಗೆ ಪರ್ಮಿಷನ್ ಕೊಟ್ಟಿರಿ. ಅವರು ಹೇಳಿಕೆಯ ಪ್ರತಿಯನ್ನು ಮೊದಲೇ ಕಳಿಸಿರಲಿಲ್ಲ. You permitted him to raise it and orally he submitted it. ಅವರು ಹೇಳಿಕೆ ಕೊಟ್ಟರು, ತಾವು ಪರ್ಮಿಟ್ ಮಾಡಿದ್ದರಿಂದ. ಅಲ್ಲಿಗೇ ಅದು ಮುಗಿಯಿತು. ಆಮೇಲೆ ಮಾನ್ಯ ರಘುಪತಿಯವರೂ ಕೂಡ ಕೊಟ್ಟಾಗ ಮೊದಲು ಅವರು ಕಾಪಿಯ ಮೇಲೆ ಒಪ್ಪಿಗೆ ಪಡೆದಿರಲಿಲ್ಲ. ಅದರೂ ಅವಕಾಶ ಕೊಟ್ಟಿರಿ.

ಇತ್ತೀಚೆಗೆ ಮಾನ್ಯ ಅಬ್ದುಲ್ ನಜೀರ್ ಸಾಬ್ ಅವರ ವೈಯುಕ್ತಿಕ ವಿಚಾರ ಬಂದಾಗ ಡಿಬೆಟ್ ನಡೆಯುತ್ತಿದ್ದರೂ ಮಧ್ಯದಲ್ಲಿ ಎದ್ದು ನಿಂತರು. ವೈಯಾಕ್ತಿಕ ಹೇಳಿಕೆಯನ್ನು ಕೊಡ ಬೇಕೆಂದು ಹೇಳಿದರು. ಅದಕ್ಕೆ ತಾವು ಒಪ್ಪಿದಿರಿ. ಅವರು ಹೇಳಿಕೆಯನ್ನು ಕೊಟ್ಟರು. ಅವರ ಹೇಳಿಕೆಯ ಪ್ರತಿಯನ್ನು ಅಡ್ವಾನ್ಸ್‌ನಾಗಿ ತಮಗೆ ಕೊಟ್ಟಿಲ್ಲ. ಆದರೂ ಅವರು ಹೇಳಿಕೆ ಕೊಟ್ಟರು. ಮಾನ್ಯ ದೇವೇಗೌಡರವರ ಪರಿಸ್ಥಿತಿಯೂ ಕೂಡಾ ಅದೇ ಬಂತು, ಅವರು ಹೇಳಿಕೆಯನ್ನು ಕೊಡಲು ಎದ್ದು ನಿಂತರು ತಾವು ಅದಕ್ಕೆ ಪರ್ಮಿಷನ್ ಕೊಟ್ಟಿರಿ. ಅವರು ಹೇಳಿಕೆ ಕೊಟ್ಟರು. ತಾವು ಅವರಿಂದ ಅಡ್ವಾನ್ಸ್ ಕಾಪಿಯನ್ನು ಕೇಳಿಲ್ಲ. ಅವರು ಪೂರ್ತಿ ಹೇಳಿಕೆಯನ್ನು ಒಪ್ಪಿಸಿ ಕೂತರು. ಮಾನ್ಯ ಗೋವಿಂದೇಗೌಡರೂ ಸಹಾ ಇದೇ ರೀತಿ ಒಪ್ಪಿಗೆ ಕೊಟ್ಟಿದ್ದು ನೆನಪು, ಆದೂ subject to correction.

ಶ್ರೀ ಎಚ್. ಎಲ್. ತಿಮ್ಮೇಗೌಡ.—ಇನೇ ತಾರೀಖು ಸ್ಟೇಟ್‌ಮೆಂಟ್ ಕೊಡುವುದರ ಬಗ್ಗೆ ಬುಲೆಟಿನ್ ಹೊರಟಿದೆ. ಅದನ್ನು ನೋಡಿ ಸ್ವಾಮಿ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಅದಕ್ಕೂ ನಾನು ಆಮೇಲೆ ಬರುತ್ತೇನೆ. ಇಲ್ಲಿ ಮಾನ್ಯ ಸಚಿವರುಗಳು ಪರ್ಸನಲ್ ಎಕ್ಸ್‌ಪ್ಲನೇಷನ್ಸ್ ಕೊಟ್ಟಿದ್ದಾರೆ. ಹಾಗೂ ಸದಸ್ಯರು ಸಹಾ ಕೊಟ್ಟಿದ್ದಾರೆ. ಅದಕ್ಕೆ ಯಾವ ರೀತಿಯ ಅಡ್ವಾನ್ಸ್ ಕಾಪಿಯನ್ನು ತಮಗೆ ಕೊಟ್ಟಿಲ್ಲ. ಆದರೂ ಕೂಡ ತಾವು ಪರ್ಮೀಷನ್ ಕೊಟ್ಟಿರಿ. ಅವರುಗಳು ಹೇಳಿಕೆ ಕೊಟ್ಟರು. ಒಂದು ಪರಂಪರೆ, ಒಂದು ಪ್ರಾಕ್ಟೀಸ್ ಈ ಸದನದಲ್ಲಿ ಇದುವರೆವಿಗೂ ನಡೆದುಕೊಂಡು ಬಂದಿದೆ. ೧೯೭೨ನೇ ಇಸವಿಯಿಂದ ನಾನು ಸಕ್ರಿಯವಾಗಿ ಕೆಲಸ ಮಾಡಿಕೊಂಡು ಬರುತ್ತಿದ್ದೇನೆ. ಅಡ್ವಾನ್ಸ್ ಕಾಪಿಯನ್ನು ಕೂಡಾ ನಾನು ತಮಗೆ ಕಳಿಸಿ ಅದಕ್ಕೆ ಒಪ್ಪಿಗೆಯನ್ನು ಪಡೆದು ಹೇಳಿದ ಪ್ರಸಂಗಗಳು ನನಗೆ ನೆನಪು ಇಲ್ಲ. I may be corrected. My memory may be corrected. ಆದರೆ ಈ ದಿವಸ ಈ ಪ್ರಸಂಗ ಬಂದುಬಿಟ್ಟಿದೆ. ಅಧ್ಯಕ್ಷರೇ, ಇವತ್ತು ತಾವು ಒಂದು ಬುಲೆಟಿನ್ ಕಳುಹಿಸಿದ್ದೀರಿ. ಅದನ್ನು ನಾವು ಈಗಲೇ ನೋಡುತ್ತಿದ್ದೇವೆ. ನಮ್ಮ ಮನೆಗೆ ಇದು ಬಂದಿರಲಿಲ್ಲ. ಮಾರ್ಚ್ ೩ ೧೯೮೬ರ ಬುಲೆಟಿನ್ ಇದು, ಈ ತಿಂಗಳ ತಾರೀಖಿನ ಬುಲೆಟಿನ್ ನಮಗೆ ಇನ್ನೂ ಬಂದಿಲ್ಲ. ನಿನ್ನೆಯೇ ಇದು ನಮ್ಮ ಟೇಬಲ್‌ಗೆ ಬರಬೇಕಾಗಿತ್ತು. ನಮಗೆ ಇದು ರಾತ್ರಿ ಬರತಕ್ಕದ್ದು ಇದೆ. ನಿನ್ನೆ ತಾವು ಇದನ್ನು ಇಷ್ಯೂ ಮಾಡಿದ್ದರೂ ಕೂಡಾ ಇನ್ನು ನಮಗೆ ಬಂದಿರಲಿಲ್ಲ, ಇವತ್ತು ತಮ್ಮ ಕಾರ್ಯದರ್ಶಿಯವರಿಂದ ಒಂದು ಪ್ರತಿಯನ್ನು ತೆಗೆದುಕೊಂಡು ಇಲ್ಲಿಉದ್ಧರಣ ಮಾಡಬೇಕಾಯಿತು. ಇದನ್ನು ನಮ್ಮ ಪಾರ್ಲಿಮೆಂಟ್ ಸಚಿವರು ಕೂಡಾ ಹೇಳಿದರು. ಬುಲೆಟಿನ್‌ನಲ್ಲಿ ತಾವು ಕೆಲವು ವಿಷಯಗಳನ್ನು ಹೇಳಿದ್ದೀರಿ. ಆದರೆ ತಮಗೆ ಗೊತ್ತಿದೆ. It can state the rule and nothing else. There is no force of rule as far as this bulletin is cohcerned. ಆದುದರಿಂದ ಇದು ನಮ್ಮ ಗೈಡೆನ್ಸ್‌ಗೆ, ತಾವು ಈ ಸದನವನ್ನು ನಡೆಸುವುದಕ್ಕೆ ಸಹಕಾರವನ್ನು ಕೇಳತಕ್ಕ ಪರಿಸ್ಥಿತಿಯಲ್ಲಿ ಬುಲೆಟಿನ್‌ನ್ನು ಇಷ್ಯೂ ಮಾಡಿದ್ದೀರಿ. ಆದರೆ ನಾನು ನಿಮ್ಮ ಪ್ರೊಪ್ರೈಟಿಯನ್ನು ಪ್ರಶ್ನೆ ಮಾಡುವುದಿಲ್ಲ. ಆದರೆ It may not acquire any force of rule or law. ಆದುದರಿಂದ ಇದಕ್ಕೆ ಹೆಚ್ಚಿನ ಮಹತ್ವವನ್ನು ತಾವು ಕೊಡುವುದಿಲ್ಲ. Only to the extent of seeking the co-operation you may at the most ask the Members to abide by it. But, it may not have a force or an authority of a rule. ಅದನ್ನು ನಮ್ಮ ಸದನದ ಮೇಲೆ ಹೇರುವುದಿಲ್ಲ ಎನ್ನುವ ಖ್ಯಾತಿ. ವಿಶ್ವಾಸ ಭರವಸೆ ನಮಗೆ ಇದೆ. ಆದುದರಿಂದ ರೂಲ್ ಬಗ್ಗೆ ನಾನು ಹೆಚ್ಚು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಮಾನ್ಯ ಸಂಸದೀಯ ಸಚಿವರು ಪರ್ಸನಲ್ಸ್ ಎಕ್ಸ್‌ಪ್ಲೇಷನ್ ಬಗ್ಗೆ. ಅದರಲ್ಲಿ ಇರತಕ್ಕ ಇಡೀ ಅಧ್ಯಾಯವನ್ನು ತಮಗೆ ಓದಿ ಹೇಳಿದರು A right is vested on a Member. It is vested with the Member It may not be so lightly taken away. Once a right is vested how can we take it away ? This is a substantive rightvested in the Member. Here, he is put in a handicap. Personal allegation is made, The entire House, the entire heritage of the House and the Speaker who is presiding over-Presiding Duty-has to protect the right, the interest and the privilege of such Members. Great heritage and all this will have to rise up to the occasion and say I want to protect this Member from the allegations made. This is the greatest right which is vested with the Member, the substanttive right. ಇವತ್ತು ಇದನ್ನು ತೆಗೆದುಕೊಳ್ಳುವುದರ ಬಗ್ಗೆ ನಕಾರಾತ್ಮಕವಾಗಿ ಹೇಳತಕ್ಕ ಪ್ರಸಂಗ ಮಾನ್ಯ ಸಂಸದೀಯ ಸಚಿವರುಗಳಿಂದ ಬಬಾರದಿತ್ತು. ಇದನ್ನು ಬೇರೆ ಯಾರಾದರೂ ಮಂತ್ರಿಗಳು ಹೇಳಿದ್ದರೆ ಅದಕ್ಕೆ ಸ್ವಲ್ಪ ಮಾರ್ಜಿನ್ ಇತ್ತು. ಆದರೆ ಮಾನ್ಯ ಸಂಸದೀಯ ಸಚಿವರು,

Irrespective of the party alliance, irrasspective of the Ministry one belongs, first of all his absolute loyalty is to the House, and to uphold the practice and conventions of this House. To-day by raising this Point of Order the Hon. Minister has failed to protect this interest of the House and the heritage.

SRI A. LAKSHMISAGAR,—I have said what is the rightest thing possible under the Rules of Procedure

ಶ್ರೀ ಎಂ. ವೀರಪ್ಪ ಮೊಯ್ಲಿ.—ಅಧ್ಯಕ್ಷರೇ, ಇವತ್ತು ಶೆಕ್ಧರ್ ಅಂಡ್ ಕೌಲ್ ಪುಸ್ತಕದ ಪುಟ ೩೪೧ರಲ್ಲಿ ಇರುವುದನ್ನು ಓದೋಣ. ತಾವೂ ಕೂಡಾ ವಕೀಲರಿದ್ದೀರಿ. ಕೆಲವಾರು ಪ್ರಿಸಿಡೆಂಟ್ಸ್‌ನ್ನು ನಾವು ಇಲ್ಲಿ ಸೈಟ್ ಮಾಡುತ್ತೇವೆ. ಕೆಲವು ನ್ಯಾಯಾಧೀಶರ ಅಭಿಪ್ರಾಯಗಳು ಬೇರೆ ಇರುತ್ತವೆ. ಹಿಂದಿನ ಕೆಲವು ತೀರ್ಪುಗಳನ್ನು ನಾವು ಇಲ್ಲಿ ಕೋಟ್ ಮಾಡುತ್ತೇವೆ. ಆ ಎಕ್ಸ್‌ಟೆಂಟ್‌ವರೆವಿಗೂ ಇದು ಸರಿಯಾಗಿದೆ. ಈಗ ಸುಪ್ರೀಮ್‌ಕೋರ್ಟ್ ತೀರ್ಪು ಇದೆ. ಅದೆನ್ನು ಕೋಟ್ ಮಾಡುವಾಗ ಮತ್ತೊಂದು ಆರ್ಗ್ಯುಮೆಂಟ್ ಇದೆ. ಸಬ್‌ಸ್ಟಾಂಟೀವ್ ರೈಟ್ ಒಬ್ಬ ಸದಸ್ಯರಿಗೆ ಯಾವ ರೀತಿ ಬರುತ್ತದೆ ಎಂದು ಹೇಳಿ ಇಲ್ಲಿ ಉದ್ಧರಣೆ ಮಾಡಿದೆ. ಕೌಲ್ ಅಂಡ್ ಶೆಕ್ಧರ್ ಪುಸ್ತಕದ ಪುಟ ೩೪೧ರಲ್ಲಿ ಈ ರೀತಿ ಹೇಳಿದ್ದಾರೆ.—

> " Members against whom comments or criticisms of a personal nature are made on the floor of the House are entitled to make, with the consent of the Speaker, personal explanations in their defence, although there is no question before the House. A member has a right to make a personal explanation not with standing the fact that the allegations made against him in the House do not relate to him in his capacity as a Member.....

ಆದುದರಿಂದ ಇವತ್ತು ಇವರಿಗೆ ಹಕ್ಕು ಇದೆ. ಪರ್ಸನಲ್ ಎಕ್ಸ್‌ಪ್ಲನೇಷನ್ ಕೊಡುವುದಕ್ಕೆ ಪರ್ಮೀಷನ್ ಬೇಕು ಎಂದು ಇದೆ. ಕೊನೆಯ ಭಾಗವನ್ನು ನಮ್ಮ ಸಂಪದೀಯ ಸಚಿವರು ಓದಬೇಕು.

It is not from theprocedings of the Lok Sabha. This citation for the rule 357 is clarified by the opinion of Shakder and Kaul. It is not the opinion explained by the Speaker ofthe Lok Sabha. It is an opinion arising out of the procedings of the Lok Sabha. Further it is said.

> " When the member in question does not wish to make a personal explanation on the spot or if he is not present at that time in the House, he is allowed to make a statement later on. In this case the member seeking permission for a personal explanation either places personally the facts before the Speaker in his Chamber or makes a written request to him enclosing a copy of the statement to be made by him by way of proposed explanation or a gist thereof. The advance copy of the statement is examined with a view to seeing that it is brief and concise and does not introduce any further controversial or debatable matter."

This citation is not from the debate from the Lok Sabha. It is not from the proceedings of the Lok Sabha. Proceeding of the Lok Sabha or a rulling by the Speaker in the Lok Sabha may have a binding nature as far as this proceedings is concerned. This is not a guideline from the speaker, from the proceedings of the House. This is the comment. Every sentence of Kaul and Shakhdher is not to be taken into consideration and every sentence is not having an authority of law, of precedent or a convention. It is not a ruling by the Speaker. It is only arising out of the proceedings of the Lok Saabh. Please let me quote Rule 357 of Lok Sabha.

> " A member may with the permission of the Speaker, maka personal explanation although there is no question before the House, but in this case no debatable matter may be brought forward, and no debate shall arise. "

Rule 357 has been cited in this, To that extent, the point made by Shakhdher and Kaul in this book is redundant. It is redundant.

6-00 P.M.

ಆದರೂ ಕೂಡ ರೂಲ್ ೩೫೭ has been cited in this. So to that extent the cition made by Kaul and Shakdar in this book is ridden. It is ridended. ದಯವಿಟ್ಟು ಪುಸ್ತಕವನ್ನು ನೋಡಿ. ಇಲ್ಲಿ ಬರೆದಿರುವುದನ್ನೆಲ್ಲಾ ರೂಲ್ ಆಫ್ ಅಥಾರಿಟಿ ಎಂದು ಹೇಳುವುದಕ್ಕಾಗುವುದಿಲ್ಲ. ಆದ್ದರಿಂದ ಅದು ಪ್ರೊಸೀಡಿಂಗ್ಸ್‌ನಲ್ಲಿ ಇಲ್ಲ. ಲೋಕಸಭಾ ರೂಲಿಂಗ್‌ನಲ್ಲಿಲ್ಲ, ಯಾವುದೇ ಒಂದು ರೂಲಿಂಗ್ ತಂದುಕೊಟ್ಟರೆ I can argue for them. ಆ ಕ್ವೆಶ್ಚನ್ ಇಲ್ಲಿ ಅರೈಸ್ ಆಗುವುದಿಲ್ಲ. ಇವತ್ತು ಈ ಪಾಯಿಂಟ್ ಆಫ್ ಆರ್ಡರನ್ನು ಅವರು ರೈಸ್ ಮಾಡಿದರು. Leader of the Opposition is handicaped. ಅವರು ಇಲ್ಲದಿರುವ ಸಂದರ್ಭವನ್ನು ನೋಡಿ ಒಂದು ಹೇಳಿಕೆ ಬಂತು. ಇವತ್ತು for the first point of time ಅವರು ಬೆಂಗಳೂರಿಗೆ ಬಂದಕೂಡಲೇ ನಾನು ಒಂದು ಪರ್ಸನಲ್ ಎಕ್ಸ್‌ಪ್ಲನೇಷನ್ ಕೊಡುತ್ತೇನೆಂದು ಹೇಳುವ ಸಂದರ್ಭದಲ್ಲಿ ನೀವು ಕೊಡಬೇಡಿ ಎಂದು ಪುನಃ ಅವರ ಬಾಯನ್ನು ಮುಚ್ಚಿಸತಕ್ಕ ಕೆಲಸ ಏನು ನಡೆದಿದೆ ಇದಕ್ಕಿಂತ ಹೀನಕೃತ್ಯ ಮತ್ತೊಂದಿಲ್ಲ. ಪೊನ್ನೆ ಕೊಟ್ಟ ಒಂದು ಹೇಳಿಕೆ ಕೂಡ ಈ ಡೆಪಾರ್ಟ್‌ಮೆಂಟಿಯಲ್ಲಿ ಒಂದು ಕನಿಷ್ಟ ದರ್ಜೆಗೆ ಸೇರಿದ್ದು ಇವತ್ತು, ಇನ್ನೂ ಮತ್ತಷ್ಟು ಕನಿಷ್ಟ ದರ್ಜೆಗೆ ಈ ಸದನವನ್ನು ತೆಗೆದುಕೊಂಡು ಹೋಗತಕ್ಕ ಕೆಲಸ ನಡೆಯಬಾರದು. ಈ ಡಿಪಾರ್ಟ್‌ಮೆಂಟಿಯ ಸಂಸದೀಯ ವ್ಯವಹಾರಗಳ ಸಚಿವರಾಗಿ, ಟ್ರೆಜರಿ ಬೆಂಚ್‌ನಲ್ಲಿದ್ದುಕೊಂಡು ಏತಕ್ಕೆ ಹೆದರುತ್ತಿದ್ದೀರಿ? ಈ ಪರ್ಸನಲ್ ಎಕ್ಸ್‌ಪ್ಲನೇಷನ್ನು ಕೇಳಿದರೆ ಈ ಸದನದಲ್ಲಿ ಈ ವಿಚಾರವನ್ನು ಮುಂಚ್ಚಿಡತಕ್ಕ ಕೆಲಸವನ್ನು ಏತಕ್ಕೆ ಮಾಡುತ್ತೀರಿ? ಯಾವಾಗ ತಾವು ಬುಡವಿಲ್ಲದ ಆಪಾಧನೆಯನ್ನು ಮಾಡುತ್ತೀರಿ, ಪೈಲ್ ಅಲಿಗೇಷನ್‌ನ್ನು ತಾವು ಮಾಡುತ್ತೀರಿ ಅದನ್ನು ಮಾಡಿದಮೇಲೆ ಇವತ್ತು ಅದರ ಬಗ್ಗೆ ಪರ್ಸನಲ್ ಎಕ್ಸ್‌ಪ್ಲನೇಷನ್ ಕೊಡತಕ್ಕ ಹಕ್ಕನ್ನೂ ಕೂಡ...

ಶ್ರೀ ಎಸ್. ಆರ್. ಬೊಮ್ಮಾಯಿ.—ಮೊಯ್ಲಿಯವರೆ ದಯವಿಟ್ಟು ಒಂದು ನಿಮಿಷ ಈಲ್ಡ್ ಆಗಬೇಕು. ಇಲ್ಲಿ ತಾವು ಒಂದು ವಿಚಾರವನ್ನು ಆಲೋಚನೆ ಮಾಡಬೇಕು. Wile allegations have been made ಎಂದು ತಾವು ಹೇಳುತ್ತಿದ್ದೀರಿ, No wild allegations have been made by the Hon'ble Minister. He has read out a statement of a

deceased person made during the investigation. No specific allegation has been made by the Hon'ble Minister. Therefore, don't presume that the Hon'ble Minister has made wild allegations.

ಶ್ರೀ ಎಂ. ವೀರಪ್ಪಮೊಯ್ಲಿ.—ಎಂಥ ಸ್ಟೇಟ್‌ಮೆಂಟ್‌ನ್ನು ಓದಿದ್ದಾರೆ. ನಿಯಮ ೧೬೨ರ ಪ್ರಕಾರ ಸ್ಟೇಟ್‌ಮೆಂಟ್‌ನ್ನು ಓದಿದ್ದಾರೆ. ನನಗೆ ಮತ್ತೊಬ್ಬ ಹೇಳಿದ [illegible]ಎಂದು even that if were to go before the court it cannot bo corraborated. Because it is a hear say...

SRI S. R. BOMMAI—My only point is, Hon'ble Minister has no, mode any allegations. Hon'ble Member can interpret in hisown way, he has got every right. The Hon'ble Leader of the Oppostion has got right to make a statement but that right has to be exercised according to the rules and conventions. When and how it is to be made it is a matter to be decieded by the Hon'ble Speaker.

(ಗೊಂದಲ)

ಶ್ರೀ ಎಂ. ವೀರಪ್ಪಮೊಯ್ಲಿ.—ಮಾನ್ಯ ಅಧ್ಯಕ್ಷರೆ, ಈ ಸದನದಲ್ಲಿ ನಡೆಯುವುದು ಎಲ್ಲವೂ ತಮಗೆ ಗೊತ್ತಿದೆ, ನಾವು ಬಹಳ ಹಿಂದಿನಿಂದಲೂ ಒಂದು ಉಜ್ವಲ ಪರಂಪರೆಯನ್ನು ಇಟ್ಟುಕೊಂಡು ಬಂದಿದ್ದೇವೆ. ಇವತ್ತು ಒಂದು ಕಣ್ಣಿಗೆ ಸುಣ್ಣ ಒಂದು ಕಣ್ಣಿಗೆ ಬೆಣ್ಣೆಯನ್ನು ಹಾಕತಕ್ಕ ಕೆಲಸ ಈ ಸದನದಲ್ಲಿ ನಡೆಯಬಾರದು. ಟ್ರೆಜರಿ ಬೆಂಚ್‌ನಲ್ಲಿರತಕ್ಕ ಮಂತ್ರಿಗಳು ಹೇಳಿಕೆಯನ್ನು ಕೊಡಬಹುದು.ಆ ಒಂದು ಪರಂಪರೆ ನಡೆದುಕೊಂಡು ಬಂದಿದೆ, ಸರ್ಕಾರದವರೂ ಹೇಳಿಕೆಯನ್ನು ಕೊಡಬಹುದು.ಈ ಒಂದು ಪರಂಪರೆ ಕೂಡ ಹಿಂದಿನಿಂದ ಹಿಂದಿನಿಂದ ನಡೆದುಕೊಂಡು ಬಂದಿದೆ. ಆದರೆ ಇವತ್ತು ವಿರೋಧಪಕ್ಷದ ನಾಯಕರು, ವಿರೋಧಪಕ್ಷದವರು ಇಲ್ಲಿ ನಡೆದಿರತಕ್ಕ ಕನ್ವೆನ್‌ಷನ್, ಪ್ರಾಕ್ಟಿಕಲ್ಸ್ ಮತ್ತು ರೂಲ್ಸ್ ಪ್ರಕಾರ ತಮ್ಮ ಅನುಮತಿಯನ್ನು ಪಡೆದು ನಾನು ಹೇಳಿಕೆಯನ್ನು ಕೊಡುತ್ತೇನೆಂದು ಬರುವ ಸಂದರ್ಭದಲ್ಲಿ ಅದನ್ನು ತಡೆ ಹಿಡಿಯಂತಕ್ಕ ಪ್ರಯತ್ನ ಖಂಡಿತವಾಗಿಯೂ ಈ ಸದನಕ್ಕೆ ಗೌರವ ಸಲ್ಲತಕ್ಕದಲ್ಲ. ನಾನು ಏನು ಹೇಳುತ್ತಿದ್ದೇನೆ ಎಂದರೆ ಮಾನ್ಯ ಸಚಿವರು ಏನು ಪಾಯಿಂಟ್ ಆಫ್ ಆರ್ಡರನ್ನು ರೈಸ್ ಮಾಡಿದ್ದಾರೆ ಅದನ್ನು ದಯವಿಟ್ಟು ಹಿಂದಕ್ಕೆ ತೆಗೆದುಕೊಳ್ಳಬೇಕು. ಇದರಿಂದ ಅವರ ಘನತೆ ಹೆಚ್ಚುತ್ತದೆ, ಮಾನ್ಯ ಅಧ್ಯಕ್ಷರೆ ತಾವೂ ಕೂಡ ಈ ದಿಸೆಯಲ್ಲಿ ಪ್ರಾಮಾಣಿಕತೆ ಇದ್ದರೆ, ಹೃದಯದ ನಿರ್ಮಲತೆ ಇದ್ದರೆ ಅವರು ಕೊಡತಕ್ಕ ಪರ್ಸನಲ್ ಎಕ್ಸ್‌ಪ್ಲನೇಷನ್‌ನ್ನು ಸ್ವೀಕಾರ ಮಾಡತಕ್ಕ ಹೃದಯ ಶ್ರೀಮಂತಿಕೆಯನ್ನು ತೋರಿಸಬೇಕು. ಇಲ್ಲದಿದ್ದರೆ ಆದರಲ್ಲಿ ಏನಾದರೂ ದುರುದ್ದೇಶ ಇಟ್ಟುಕೊಂಡು ನೀವು ವೈಲ್ಡ್ ಅಲಿಗೇಷನ್ ಮಾಡುತ್ತೀದ್ದೀರಂದು ನಾನು ಹೇಳಬೇಕಾಗುತ್ತದೆ. ಇವತ್ತು ಅವರು ಪರ್ಸನಲ್ ಎಕ್ಸ್‌ಪ್ಲನೇಷನ್ ಕೊಡುವುದಕ್ಕೆ ಅವರಿಗೆ ಅಪ್ಪಣೆಯನ್ನು ಕೊಟ್ಟೀದ್ದೀರಿ. ಆದ್ದರಿಂದ ಅವರು ಎಕ್ಸ್‌ಪ್ಲನೇಷನ್ ಕೊಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಅಧ್ಯಕ್ಷರಲ್ಲಿ ಮತ್ತೊಮ್ಮೆ ಪ್ರಾರ್ಥಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ ನಾನು ಪ್ರಸ್ತಾಪ ಮಾಡಿದ್ದಕ್ಕೆ One word by way of reply ಸಾಕಿತ್ತು ಅದಕ್ಕೆ ನಾನು ಎತ್ತಿದ ಕ್ರಿಯಾಲೋಪ ಇರಲಿವೆಂಟ್ ಎಂದು ಹೇಳಿ ಈ ವಿಷಯಕ್ಕೆ ಸಂಬಂಧ ಪಡದೇ ಇರತಕ್ಕದ್ದಂ ಮೇಲೆ ಬಹಳ ದೀರ್ಘವಾಗಿ, ಪುಂಖಾನುಪುಂಖವಾಗಿ ಅವರು ತಮ್ಮ ವ್ಯಾಖ್ಯಾನವನ್ನು ಮಂಡಿಸಿದ್ದಾರೆ. ನಾನು ಹೇಳಿದ್ದಾದರೂ ಇಷ್ಟೇ. ಸ್ವಂತ ಹೇಳಿಕೆಗಳನ್ನು ಕೊಡತಕ್ಕಂಥ ಸಂದರ್ಭದಲ್ಲಿ ಬರೆದುಕೊಡತಕ್ಕ ಅಭ್ಯಾಸ ಹಿಂದೆ ಇರಲಿಲ್ಲ ಎನ್ನತಕ್ಕ ಮಾತನ್ನು ನಾನು ಒಪ್ಪಿಕೊಂಡಿದ್ದೇನೆ ...

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೆ, ಶ್ರೀಮಾನ್ ಬಾಳಿಗಾರವರು ಈ ಸದನದ ಅಧ್ಯಕ್ಷರಾಗಿದ್ದಾಗ ಯಾವುದೇ ಸಂದರ್ಭದಲ್ಲೂ ಕೂಡ ಪರ್ಸನಲ್ ಎಕ್ಸ್‌ಪ್ಲನೇಷನ್‌ನ್ನು ಕೊಡುವಾಗ ಅದನ್ನು ಲಿಖಿತಮೂಲಕವಾಗಿ ತಮ್ಮ ಹತ್ತಿರ ಕೊಟ್ಟಮೇಲೆಯೇ ಅದನ್ನು ಹೇಳಿಕೆ ಕೊಡಲಂ

ಪರವಾನಗಿಯನ್ನು ಕೊಡುತ್ತಿದ್ದರು. ಆದರೆ ಅದಕ್ಕೂ ಮೊದಲು ಅವಕಾಶವನ್ನು ಕೊಟ್ಟಿಲ್ಲ. ಅವರು ೧೯೭೨ನೇ ಇಸವಿಯಿಂದ ಈ ಸದನದಲ್ಲಿದ್ದಾರೆ ನಾನು ೧೯೫೭ನೇ ಇಸವಿಯಿಂದ ಈ ಸದನದಲ್ಲಿದ್ದೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೆ, ನಾನು ಏನು ಹೇಳಬೇಕೆಂದು ಪ್ರಯತ್ನ ಮಾಡಿದ್ದೆ ಎಂದರೆ...

ಶ್ರೀ ಎಸ್. ಬಂಗಾರಪ್ಪ.—ಇಲ್ಲ ಪಯಂಸ್ಸು ಮತ್ತು ಎಕ್ಸ್‌ಪೀರಿಯನ್ಸ್ ಮುಖ್ಯವಲ್ಲ...

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್,—ಮಾನ್ಯ ಅಧ್ಯಕ್ಷರೇ, ನಾನು ವಿಷಯವನ್ನು ಹೇಳಿ ಮುಂಗಿ ಸುತ್ತೇನೆ...

ಶ್ರೀ ಗೋಪಾಲ ಮುಕುಂದ ಕಾನಡೆ.—ಮಾನ್ಯ ಅಧ್ಯಕ್ಷರೆ....

ಅಧ್ಯಕ್ಷರು.—ಕಾನಡೆಯವರೆ, ತಮಗೆ ನಾನು ಅವಕಾಶವನ್ನು ಕೊಡುತ್ತೇನೆ, ದಯವಿಟ್ಟು ಕೊತುಕೊಳ್ಳಿ.

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಇದರ ಮೇಲೆ ಒಂದು ದೊಡ್ಡ ವ್ಯಾಖ್ಯಾನವನ್ನೇ ಮಾಡಿದ್ದಾರೆ. ಅವರು ಹೇಳಿದ್ದು ತಪ್ಪು ಎಂದು ನಾನು ಹೇಳಿದರೆ ಅವರಿಗೆ ಸಿಟ್ಟುಬರುತ್ತದೆ.ಅದು ಇದಕ್ಕೆ ಸರಿಬಂಧಪಟ್ಟದ್ದಲ್ಲ. ಈ ರೂಲ್‌ಗೆ ವಿರುದ್ಧವಾಗುವುದಿಲ್ಲವೆಂದು ಇಷ್ಟು ಮಾತ್ರ ಹೇಳುವದಕ್ಕೆ ಇಷ್ಟ ಪಡುತ್ತೇನೆ ಈ ರೂಲ್‌ನಲ್ಲಿ ಏನು ಹೇಳಿದೆ ಎಂದರೆ in this case no debatable matter be broughtforward. ಪರ್ಸನಲ್ ಎಕ್ಸ್‌ಪ್ಲನೇಷನ್ ಕೊಡತಕ್ಕ ಸಂದರ್ಭದಲ್ಲಿ ಡಿಬೇಟಬಲ್ ಮ್ಯಾಟರ್‌ನ್ನು ತರಬಾರದು ಎನ್ನುವ ದೃಷ್ಟಿಯಿಂದ ಸ್ವಂತ ಹೇಳಿಕೆಯನ್ನು ಕೊಡತಕ್ಕ ಸಂದರ್ಭದಲ್ಲಿ ಆದುಬರಹ ರೂಪದಲ್ಲಿ ಇರಬೇಕು ಇದರಲ್ಲಿ ಡಿಬೇಟಬಲ್ ಪಾಯಿಂಟ್ ಏನಾದರೂ ಇದ್ದರೆ ಮುಂಚಿತವಾಗಿ ಅದು ತಮ್ಮ ಅವಗಾಹನೆಗೆ ಬಂದು ಆದರಲ್ಲಿರತಕ್ಕ ಡಿಬೇಟಬಲ್ ಪಾಯಿಂಟ್‌ನ್ನು ತೆಗೆದುಹಾಕಿ ಉಳಿದ ವಿಷಯಗಳನ್ನು ಅವರ ಪರ್ಸನಲ್ ಎಕ್ಸ್‌ಪ್ಲನೇಷನ್ ಆಗಿ ಕೊಡಬೇಕೆಂಬ ಉದ್ದೇಶದಿಂದ ಈ ಶಬ್ದಗಳನ್ನು ಈ ರೂಲ್‌ನಲ್ಲಿ ಸೇರಿಸಿದ್ದಾರೆ. ಮಾನ್ಯ ಸದಸ್ಯರಾದ ವೀರಪ್ಪಮೊಯ್ಲಿಯವರು ಇದನ್ನು ಗಮನಿಸುತ್ತಾರೆಂದು ನಾನು ಅಂದುಕೊಂಡಿದ್ದೇನೆ. ಮಾನ್ಯ ವಿರೋಧ ಪಕ್ಷದ ನಾಯಕರ ಹಕ್ಕನ್ನು ಕಿತ್ತುಕೊಳ್ಳಬೇಕೆಂಬ ಉದ್ದೇಶ ನಮಗೆ ಇಲ್ಲ. ನಮ್ಮ ದೇಶದ ರಾಜ್ಯಾಂಗವನ್ನು, ಕಾನೂನುಗಳನ್ನು ತಲೆಕೆಳಗುಮಾಡಿ, ತಿರುಗು ಮುರುಗು ಮಾಡಿ ಬಂಗಾಳಕೊಲ್ಲಿಗೆ ಹಾಕಿದಂಥ ಸಂದರ್ಭದಲ್ಲಿ ಅದಕ್ಕೆ ವಿರುದ್ಧವಾಗಿ ಹೋರಾಟಮಾಡಿ ಜನರಿಂದ ಓಟನ್ನು ತೆಗೆದುಕೊಂಡಿರತಕ್ಕ ಜನರು ನಾವು. ಪುಕ್ಕಲು ಜನ ನಾವಲ್ಲ. ಯಾರದೋ ಆಶೀರ್ವಾದದಿಂದ....

(ಗೊಂದಲ)

ಶ್ರೀ ಎಂ. ವೀರಪ್ಪಮೊಯ್ಲಿ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಅಜ್ಜಿಯ ಕತೆಯನ್ನು ಹೇಳುತ್ತಿದ್ದಾರೆಯೆ? ಪಾಯಿಂಟ್ ಆಫ್ ಆರ್ಡರ್ ಬಗ್ಗೆ ಏನಾದರೂ ಇದ್ದರೆ ಅದನ್ನು ಹೇಳಲಿ....

ಶ್ರೀ ಎ. ಲಕ್ಷ್ಮೀಸಾಗರ್.—ಈ ಕಾನೂನು ವ್ಯಾಪ್ತಿಯಲ್ಲಿ ಏನು ಬರುತ್ತದೆ ಅದನ್ನು ಹೇಳತಕ್ಕ ಅಧಿಕಾರ ನಮಗೆ ಇದೆ. ಅದೇರೀತಿ ಮಾನ್ಯ ವೀರಪ್ಪಮೊಯ್ಲಿಯವರಿಗೂ ಇದೆ, ಉಳಿದ ಸದಸ್ಯರಿಗೂ ಇದೆ. ಆದರೆ ನಾವು ನಮ್ಮ ವಾದವನ್ನು ಮಂಡಿಸುವಾಗ "ನೀವು ಹೆದರುತ್ತಿದ್ದೀರಿ, ಹೆದರಬೇಡಿ, ಧೈರ್ಯ ತೆಗೆದುಕೊಳ್ಳಿ" ಎಂದು ಅವರು ಹೇಳಿದರು. ಆದ್ದರಿಂದ ಅದಕ್ಕೆ ಪ್ರತಿಯಾಗಿ ನಾನು ಈ ಮಾತನ್ನು ಹೇಳಿದ್ದೇನೆ. ನಾವು ಹೆದರತಕ್ಕ ಜನ ಅಲ್ಲ. ನಮ್ಮ ಜೀವವನ್ನು ಕೈಯಲ್ಲಿ ಹಿಡಿದುಕೊಂಡು ಜೈಲಿಗೆ ಹೋದಂಥ ಜನರು ನಾವು. ಬದುಕಿ ಅಲ್ಲಿಂದ ಬರುತ್ತೇವೆಂದು ನಾವು ತಿಳಿದುಕೊಂಡಿರಲಿಲ್ಲ. ತಾವು ಇದನ್ನು ತಿಳಿದುಕೊಳ್ಳಬೇಕು. ಯಾರದೋ ಒಂದು ನಾಮದ ಬಲದಮೇಲೆ ಬಂದಿರತಕ್ಕ ಜನರು ಅವರು. ಅವರಿಗೆ ಈ ವಿಚಾರ ಗೊತ್ತಾಗುವುದಿಲ್ಲ ಬಿಡಿ ಸ್ವಾಮಿ,

ಇನ್ನು ಇದು ಹೀನಕೃತ್ಯ ಎಂದು ಹೇಳಿದ್ದಾರೆ. ಮಾನ್ಯ ಅಧ್ಯಕ್ಷರೇ ಕಾನೂನು ಪ್ರಕಾರ ನಡೆದುಕೊಳ್ಳಿ ಎಂದು ನಾವು ವಾದಮಾಡಿದರೆ ಅದನ್ನು ಅವರು ಹೀನಕೃತ್ಯವೆಂದು ಹೇಳುವುದಾದರೆ ಅವರು ಮಾಡತಕ್ಕ ವಾದವನ್ನು ಯಾವ ಕೃತ್ಯವೆಂದು ನಾನು ಹೇಳಬೇಕೋ ಗೊತ್ತಾಗುತ್ತಿಲ್ಲ. ಅವರ ವಾದಕ್ಕೆ ಅವರೇ ಒಂದು ಹೆಸರನ್ನು ಕೊಟ್ಟರೆ ಒಳ್ಳೆಯದು. ಅದನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ನಾನು ಇಷ್ಟು ಮಾತ್ರ ಹೇಳಬಯಸುತ್ತೇನೆ. ಕಾನೂನು ಪ್ರಕಾರ ನಾವು ನಡೆದುಕೊಳ್ಳಬೇಕಾಗಿದೆ. ಅವರುಹೇಳಿಕೆಯನ್ನು ಕೊಟ್ಟಮೇಲೆ ಅದರಲ್ಲಿ ಡಿಬೇಟಬಲ್ ಪಾಯಿಂಟ್ ಇರಬಾರದು. ಆ ಹೇಳಿಕೆಯನ್ನು ಕೊಟ್ಟನಂತರ ಮತ್ತೆ ಈ ವಿಷಯ ಚರ್ಚೆಗೆ ಬರಬಾರದೆಂಬ ದೃಷ್ಟಿಯಿಂದ ಮಾತ್ರ ಈ ಸತ್ಸಂಪ್ರದಾಯವನ್ನು ಅವರೂ ಕೂಡ ಬೆಳೆಸಬೇಕೆಂಬ ಉದ್ದೇಶದಿಂದ ನಾನು ಈ ಮಾತನ್ನು ಹೇಳಿದ್ದೇನೆಯೇ ಹೊರತು ನೀವು ಹೇಳಿಕೆಯನ್ನು ಕೊಡಬೇಡಿ ಎಂದು ನಾನು ಹೇಳಲೇ ಇಲ್ಲ. ಹೇಳಿಕೆಯನ್ನು ಕೊಡಬೇಕೆಂದು ನಾನೇ ಹೇಳಿದೆ. ಆದರೆ ಈಗ ದಿನದ ಕೊನೆಯಲ್ಲಿ ನಾವಿದ್ದೇವೆ, ಆದ್ದರಿಂದ ಇದು ಸಮಂಯವಲ್ಲ ಎನ್ನತಕ್ಕ ಮಾತನ್ನು ಹೇಳಿದ್ದೇನೆಯೇ ಹೊರತು ಬೇರೆ ಯಾವ ಉದ್ದೇಶದಿಂದಲೂ ಅಲ್ಲ. ಎಲ್ಲ ಮಾನ್ಯ ಸದಸ್ಯರ ಹಕ್ಕುಗಳನ್ನೂ ನಾವು ತೆಗೆದುಕೊಂಡು ಹೋಗುತ್ತಿದ್ದೇವೆಂಬ ಭಾವನೆ ಮಾನ್ಯ ವೀರಪ್ಪ ಮೊಯ್ಲಿಯವರಿಗೆ ಎಲ್ಲಿಂದ ಬಂತೋ ಗೊತ್ತಿಲ್ಲ. ನಾವು ಯಾರೂ ಕೂಡ ಅವರ ಹಕ್ಕನ್ನು ತೆಗೆದುಕೊಂಡು ಹೋಗುವುದಕ್ಕೆ ಬಂದಿಲ್ಲ. ಅವರಿಗೆ ಈ ಹಕ್ಕಿನ ರಕ್ಷಣೆ ಇರಬೇಕೆಂಬ ದೃಷ್ಟಿಯಿಂದಲೇ ನಾನು ಇಷ್ಟೊಂದು ಮಾತನ್ನು ಹೇಳಿರತಕ್ಕದ್ದು.

ಆದ್ದರಿಂದ ಸನ್ಮಾನ್ಯ ವೀರಪ್ಪಮೊಯಿಲಿಯವರು ಹೇಳಿದಂಥ ಒಂದು ವಾಖ್ಯಾನದಲ್ಲಿ ಮೂಲ ತತ್ವದ ಬಗ್ಗೆ ಅವರು ಪ್ರಶ್ನೆ ಮಾಡಬಹುದಕ್ಕೆ ಹಕ್ಕಿಲ್ಲ, ಪ್ರಶ್ನೆಯನ್ನು ಮಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ನನ್ನ ಕ್ರಿಯಾಲೋಪವನ್ನು ಎತ್ತಿ ಹಿಡಿಯಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ ಈಗಾಗಲೇ ಪಾರ್ಲಿಮೆಂಟರಿ ಸಚಿವರು ಮತ್ತು ಮಾನ್ಯ ವೀರಪ್ಪಮೊಯಿಲಿಯವರೂ ಕೂಡ ಹೇಳಿದ್ದಾರೆ. ಆದರೆ ನಾನು ತಮ್ಮ ಮುಖಾಂತರ ಒಂದು ವಿಷಯವನ್ನು ಹೇಳಬಯಸುತ್ತೇನೆ. ಈ ಸದನಕ್ಕೆ ಮುಖ್ಯವಾಗಿ ಇರತಕ್ಕಂಥದ್ದು ನಮ್ಮ ರೂಲ್ಸ್ ಆಫ್ ಪ್ರೊಸೀಜರ್, ಕಂಡಕ್ಟ್ ಆಫ್ ಬಿಸಿನೆಸ್ ಆಫ್ ರೂಲ್ಸ್ ಯಾವಾಗ ಇಲ್ಲಿ ಸ್ಪೆಸಿಫಿಕ್ ಆಗಿ ಇರುವುದಿಲ್ಲವೋ ಆಂಥ ಸಂದರ್ಭಗಳಲ್ಲಿ ಪಾರ್ಲಿಮೆಂಟಿನಲ್ಲಿ ನಡೆದದ್ದು, ಅಲ್ಲಿ ಏನು ಕವ್ಹಿಕ್ಷನ್ ಇತ್ತು, ಮತ್ತೆ ಅಲ್ಲಿ ಏನು ಪ್ರೆಸಿಡೆಂಟ್ ಇತ್ತು ಎನ್ನತಕ್ಕಂಥದ್ದನ್ನೆಲ್ಲ ತೆಗೆದುಕೊಳ್ಳತಕ್ಕಂಥ ಪದ್ಧತಿ ಇದೆ. ಆದರೆ ಯಾವಾಗ ಇಲ್ಲಿ ರೂಲ್ಸ್ ಆಫ್ ಪ್ರೊಸೀಜರ್‌ನಲ್ಲಿ ಸ್ಪೆಸಿಫಿಕ್ ಪ್ರಾವಿಷನ್ ಇದೆ. ಆವಾಗ ಕೌಲ್ ಅಂಡ್ ಶಕ್ಧರ್‌ನ್ನಾಗಲೀ, ಕಾನ್‌ಸ್ಟಿಟ್ಯೂಷನ್ ಆಗಲಿ, ಪಾರ್ಲಿಮೆಂಟ್ರಿ ರೂಲ್ಸ್ ಆಫ್ ಪ್ರೊಸೀಜರ್‌ನಲ್ಲಿ ಏನಿದೆ ಎಂದು ನೋಡತಕ್ಕಂಥ ಪ್ರಶ್ನೆ ಇಲ್ಲ. ಇಲ್ಲಿ ಸ್ಪೆಸಿಫಿಕ್ ಆಗಿ ರೂಲ್ ಏನು ಇದೆ.

> "A Member may with the permission of the Speaker may make a personal explanation although there is no question before the House but in this case no debatable matter may be brought forward, no debate shall arise"

ಅವರು ಏನು ಎಕ್ಸ್‌ಪ್ಲನೇಷನ್ ಕೊಡುತ್ತಾರೋ ಕೊಡಲಿ ಅವರು ಕೊಡತಕ್ಕಂಥದ್ದು ಡಿಬೇಟಬಲ್. ನಾನ್‌ಡಿಬೇಟಬಲ್ ಎನ್ನುವುದು ಪ್ರಶ್ನೆಯಲ್ಲ. ಅವರು ಹೇಳುತ್ತಿದ್ದಾರೆ, ಅದಕ್ಕಿಂತ ಮುಂಚೆ ಪಾಯಿಂಟ್ ಆಫ್ ಆರ್ಡರ್ ಎಂದು, ಪಾರ್ಲಿಮೆಂಟ್‌ನಲ್ಲಿ ಹಾಗೆ ನಡೆಯಿತು ಹೀಗೆ ನಡೆಯಿತು ಎಂದು ಹೇಳತಕ್ಕಂಥದ್ದು ಹೇಳಿದರು. As far as we are concerned these rules are framed even in the Parliament. Whatever rules framed by this House, those rules are framed for the functioning of the House. When there is a clear provision I request the Hon'ble Speaker to allow the Hon'ble Leader of the Opposition to give personal explanation.

ಎರಡನೆಯದಾಗಿ ತಮ್ಮಲ್ಲಿ ರಿಕ್ವೆಸ್ಟ್ ಮಾಡಿಕೊಳ್ಳತಕ್ಕಂಥದ್ದು ಏನೆಂದರೆ ಈಗಾಲೇ ನಾವು ಬುಲೆಟಿನ್ ಕಳುಹಿಸಿಕೊಟ್ಟಿದ್ದೀರಿ. ಎಕ್ಸಿಸ್ಟಿಂಗ್ ರೂಲ್ಸ್‌ನಲ್ಲಿ ಇದರ ಬಗ್ಗೆ ಕ್ಲಿಯರ್ ಆಗಿದೆ. ಆದ್ದರಿಂದ

ರೂಲ್ಸ್‌ಗೆ ವಿರುದ್ಧವಾಗುತ್ತದೆ' ತಮ್ಮಲ್ಲಿ ಕಳಕಳಿಯಿಂದ. ಕೇಳಿಕೊಳ್ಳುತ್ತಿದ್ದೇನೆ. ತಾವು ಕಳುಹಿಸಿರ ತಕ್ಕಂಥ ಸುತ್ತೋಲೆ ಏನು ಇದೆ ಅದನ್ನು ವಿತ್‌ಡ್ರಾ ಮಾಡಿಕೊಳ್ಳಬೇಕು, ಮಂಜೂರನೆಯಾದಾಗಿ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು ಹಿಂದೆ ಎಂದೋ ಬಾಳಿಗಾರವರ ಕಾಲದಲ್ಲಿ ಪರ್ಸನಲ್ ಸ್ಟೇಟ್‌ಮೆಂಟ್ ಕೊಡುವುದಿದ್ದರೆ ಅದನ್ನು ರೈಟಿಂಗ್‌ನಲ್ಲಿ ಕೊಡುತ್ತಿದ್ದರು ಎಂದು. ಅದು ೧೯೭೦ನೇ ಇಸವಿಯ ಹಳೆ ಕತೆ ನಾವು ಈಗ ನಿರ್ಣಯ ಮಾಡತಕ್ಕಂಥದ್ದು. ಅನುಭವದ ಮೇಲೆ ಅನೇಕ ವಿಷಯಗಳ ಮೇಲೆ ನಾವು ನೀವು ಕೂಡ ಮೂರು ವರ್ಷಗಳಿಂದ ಕಾನೂನುಗಳನ್ನು ಏನು ಮಾಡಿದ್ದೇವೆ, ಅದರ ಮೇಲೆ ಚರ್ಚೆ ಯಾಗಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ.—ಮೂರು ವರ್ಷಗಳ ಹಿಂದೆ ಮಾನ್ಯ ಮುಖ್ಯ ಮಂತ್ರಿಗಳಾ ಡಿಲ್ಲಿಯಲ್ಲಿ ಇದ್ದರು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಆದ್ದರಿಂದ ತಾವು ಈ ಪ್ರಶ್ನೆಯನ್ನು ತೆಗೆದುಕೊಳ್ಳದೆ ಹೋದರೆ ನಮ್ಮನ್ನು ಹಾಳುಮಾಡಿದಂತಾಗುತ್ತದೆ. ಆದಕ್ಕಾಗಿ ತಾವು ಪರ್ಮಿಷನ್ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಕೆ. ಎಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ ಈ ವಿಷಯದ ಬಗ್ಗೆ ಇಷ್ಟೊಂದು ಸುಧೀರ್ಘ ವಾದ ಚರ್ಚೆಗೆ ಅಗತ್ಯವಿದೆ ಎನ್ನುವ ಭಾವನೆಯಿಂದ ನಾನು ಎದ್ದು ನಿಂತಿಲ್ಲ. ಆದರೆ ಪ್ರಪ್ರಥಮ ಬಾರಿಗೆ ನಮ್ಮ ಸಂಸದೀಯ ಖಾತೆಯ ಸಚಿವರು ತಮ್ಮ ಸಂಪೂರ್ಣವಾದ ಪಾಂಡಿತ್ಯವನ್ನು ಎತ್ತಿ ಒಂದು ವಿಚಾರ ಪ್ರಯೋಗ ಮಾಡಿದ್ದಾರೆ. I don't find fault with the Hon'ble Minister because basically he is a teacher, only now he is a Minister. ಇಷ್ಟೊಂದು ಉದ್ವಾವಾದಂಥ ಭಾಷಣವನ್ನು ಮಾಡಿದ್ದಾರೆ. ಮಾನ್ಯ ಅಧ್ಯಕ್ಷರೆ, ನಾನು ಒಂದು ವಿಷಯವನ್ನು ಪ್ರಪ್ರಥಮವಾಗಿ ತಮಗೆ ಮನವಿ ಮಾಡಿಕೊಳ್ಳಬಯಸುತ್ತೇನೆ. ಅದೇನೆಂದರೆ ಈ ಸಭೆಗೆ ತನ್ನ ಕೆಲಸ ಗಳನ್ನು ಹೇಗೆ ನಿರ್ವಹಿಸಬೇಕು ಎನ್ನುವ ಬಗ್ಗೆ ಸಂಪೂರ್ಣವಾಗಿ ರಾಜ್ಯಾಂಗಬದ್ಧವಾದ ಅಧಿಕಾರ ಇದೆ. ಆ ಅಧಿಕಾರವನ್ನು ಚಲಾಯಿಸಿ ನಿಯಮಗಳನ್ನು ಈ ಸಭೆ ಅಂಗೀಕರಿಸಿದೆ. ಈ ನಿಯಮಾವಳಿಗಳು ಸಾಲದು ಎಂದೂ ಇನ್ನೊಂದೂ ನಿಯಮವಾಗಲಿ ಅಥವಾ ಎಲ್ಲೋ ಇರುವಂಥ ನಿಯಮಗಳನ್ನು ತಂದು ಈ ಸಭೆಗೆ ಅದೇ ರೀತಿಯಲ್ಲಿ ಹೋಲಿಕೆ ಇದೆ ಎಂದು, ವಿಧಿವತ್ತಾಗಿದೆ ಎಂದು ಹೇಳಿದ ಮಾತ್ರಕ್ಕೆ ಮತ್ತು ಅಲ್ಲೆಲ್ಲ ಏನಾಯಿತೋ ಅದನ್ನೇ ಇಲ್ಲೂ ನಾವು ಪಾಲಿಸಬೇಕೆಂದು ಎನ್ನುವ ಸಿದ್ಧಾಂತ ಆದು ಆಗುವುದಿಲ್ಲ. ಎಷ್ಟೋ ನಿಯಮಗಳು ಲೋಕಸಭೆಯದು ನಮ್ಮ ನಿಯಮಗಳ ಹಾಗೆ ಇದ್ದರೂ ಸಹಿತ ಲೋಕಸಭೆಯೇ ಒಂದು ರೀತಿ ವ್ಯವಹರಿಸುತ್ತದೆ. ನಾವು ಮಾಡಿದಂಥ ರೀತಿಯಲ್ಲಿ ವ್ಯವಹರಿಸತಕ್ಕಂಥದ್ದು ಹಲವಾರು ನಿಯಮಗಳು ಇರುತ್ತವೆ. ಅವಕಾಶ ಕೊಟ್ಟರೆ ಗಟ್ಟಿಗಟ್ಟಲೇ ತಮಗೆ ಮನವರಿಕೆ ಮಾಡಿಕೊಡಬಲ್ಲೆ. ನಿಯಮಗಳು ಮಾನ್ಯ ಬಾಳಿಗ ಅವರ ಕಾಲದಲ್ಲಿ ಏನು ಇತ್ತು ಎನ್ನುವುದು ನನಗಿಂತ ಬಹಳ ಹಿಂದಿನಿಂದ ಇದ್ದವರಿಗೆ ಗೊತ್ತಿದೆ. ನಾನು ಸಹ ಬಾಳಿಗಾರು ಇದ್ದ ಸಮಯದಲ್ಲಿ ಅಂದರೆ ೧೯೬೭ ರಿಂದ ೧೯೭೧ ರವರೆಗೆ ಇದ್ದೆ. ಆದರೆ ಅವರು ಹೇಳಿದ್ದು ಸರಿ ಇರಬಹುದು. ನನಗೆ ಸ್ಪಷ್ಟವಾಗಿ ಹೇಳಲಿಕ್ಕೆ ಬರುವುದಿಲ್ಲ. ಅವರು ಕಡ್ಡಾಯವಾಗಿ ಸ್ಟೇಟ್‌ಮೆಂಟ್ ಇನ್‌ಸಿಸ್ಟ್ ಮಾಡತಕ್ಕಂಥದ್ದು ಇತ್ತು ಎನ್ನುವುದು ನನಗೆ ಸ್ಪಷ್ಟವಾಗಿ ಜ್ಞಾಪಕ ಇಲ್ಲ. ಅವರು ಹೇಳಿದ್ದು ಸತ್ಯ ಇರಬಹುದು. ಆದರೆ ಇತ್ತೀಚಿನ ವರ್ಷಗಳಲ್ಲಿ ಈವತ್ತಿನವರೆಗೆ ಯಾವುದೇ ಒಂದು ರೀತಿಯಲ್ಲಿ ಬರಹದ ಮೂಲಕವಾಗಿ ಒಬ್ಬ ವ್ಯಕ್ತಿ ತನ್ನ ವೈಯಕ್ತಿಕವಾದ ವಿವರಣೆಯನ್ನು ತಮಗೆ ಒಪ್ಪಿಸಿ, ತಮ್ಮನ್ನು ಹೌದೂ ಅನ್ನಿಸಿಕೊಂಡು ಆನಂತರ ಈ ಸದನದಲ್ಲಿ ಹೇಳಬೇಕು ಎನ್ನತಕ್ಕಂಥದ್ದು ಇದುವರೆಗೆ ಕಡ್ಡಾಯವಾದುದು ಇಲ್ಲ. ಇದನ್ನು ಹಲವಾರು ಸಂದರ್ಭದಲ್ಲಿ ನೋಡಿದ್ದೇವೆ. ಈ ಸದನದ ಉಪವೇಶನ ಪ್ರಾರಂಭವಾದಾಗಿನಿಂದ ನೋಡಿದ್ದೇನೆ. ಹಲವಾರು ಬಾರಿ ತಾವು ಯಾವುದೇ ರೀತಿಯಲ್ಲಿ ಈ ರೀತಿಯಾದ ಒಂದು ಪೂರ್ವಭಾವಿ ಅನುಮತಿಯನ್ನು ಕೋರಿ ಬರಹದ ಮೂಲಕ ಒತ್ತಾಯ ಮಾಡಿ ಕೇಳಿದಾಗ ನಾಳೆ ಕೇಳಬಹುದೆಂದು ಅವಕಾಶ ಕೊಟ್ಟರತಕ್ಕಂಥದ್ದನ್ನು ನಾವು ನೋಡಿದ್ದೇವೆ. ಆದರೆ ಈವತ್ತು ಮಾತ್ರ ಮಾನ್ಯ ಶ್ರೀ ಬಂಗಾರಪ್ಪನವರ ವೈಯಕ್ತಿಕವಾದ ವಿವರಣೆಯನ್ನು ಕೊಡಲು ಅನುಮತಿಯನ್ನು ಕೋರಿದ್ದಕ್ಕೆ ಇಷ್ಟೊಂದು ದೊಡ್ಡ ಸಿದ್ಧಾಂತದ ವಾದವನ್ನು ಬೆಳೆಸಿದ್ದು ಏತಕ್ಕೆ ಎಂದು ಅರ್ಥವಾಗುತ್ತಿಲ್ಲ. ಮಾನ್ಯ

ಸಂಸದೀಯ ಸಚಿವರು ಇದಕ್ಕೆ ಒಂದು ಕಾರಣವನ್ನು ಕೊಟ್ಟರು. ಅದು ಏನೆಂದರೆ ಇದರಲ್ಲಿ ಡಿಬೇಟಬಲ್ ಪಾಯಿಂಟ್ ಬರಬಾರದು, ಡಿಬೇಟಬಲ್ ಪಾಯಿಂಟ್ ಬಂದರೆ ಕಷ್ಟವಾಗುತ್ತದೆ, ಅದಕ್ಕೋಸ್ಕರವಾಗಿ ಸೆನ್ಸಾರ್ ಮಾಡಬೇಕಾಗುತ್ತದೆಂದು ಹೇಳುವುದಾದರೆ ಈ ಸದನದಲ್ಲಿ ಯಾರೂ ಮಾತನಾಡುವುದಕ್ಕೆ ಸಾಧ್ಯವೇ ಇಲ್ಲ. ರೂಲ್ ನಂಬರ್ ೩೧೦ನ್ನು ನೋಡಿ ಅಲ್ಲಿ ಏನು ಹೇಳುತ್ತಾರೆಂದರೆ :

ಸದಸ್ಯರು ಮಾತನಾಡುವಾಗ :—

ನ್ಯಾಯಾಲಯದಲ್ಲಿ ಇತ್ಯರ್ಥದಲ್ಲಿದ್ದು ಇನ್ನೂ ತೀರ್ಪು ನೀಡಿರದ ಯಾವುದೇ ಸಂಗತಿಯನ್ನು ಕುರಿತು ಮಾತನಾಡತಕ್ಕುದಲ್ಲ.

ಸದಸ್ಯರೊಬ್ಬರಮೇಲೆ ವೈಯಕ್ತಿಕ ದೋಷಾರೋಪಣೆ ಮಾಡತಕ್ಕುದಲ್ಲ.

ಸಂಸತ್ತು ಅಥವಾ ಯಾವುದೇ ರಾಜ್ಯ ವಿಧಾನ ಮಂಡಲದ ವ್ಯವಹರಣೆಗಳು ಮತ್ತು ನಡವಳಿಕೆಗಳನ್ನು ಕುರಿತು ಹೀನಾಯವಾಗಿ ಮಾತನಾಡತಕ್ಕುದಲ್ಲ.

ಸದನದ ಯಾವುದೇ ತೀರ್ಮಾನವನ್ನು ಕುರಿತು ಅದನ್ನು ರದ್ದುಪಡಿಸಲು ಪ್ರಸ್ತಾವ ಮಂಡಿಸುವಾಗ ಹೊರತು ಇನ್ನಾವುದೇ ಆರೋಪಣೆ ಮಾಡತಕ್ಕದಲ್ಲ.

ಹೀಗೆ ಹಲವಾರು ನಿಯಮಗಳು ಇದೆ. ಒಬ್ಬ ವ್ಯಕ್ತಿ ಮಾತನಾಡಬೇಕಾದರೆ ಈ ಸದನದಲ್ಲಿ ಏನು ಮಾಡಬೇಕು ಎಂದರೆ ಆತನು ಮೊದಲು ಭಾಷಣವನ್ನು ಬರೆದು ಕೊಡಬೇಕು, ನಿಯಮಗಳನ್ನು ಪಾಲಿಸಿದ್ದಾನೆಯೋ, ಇಲ್ಲವೋ ಎನ್ನುವುದನ್ನು ನೋಡಬೇಕು. ಅದನ್ನು ನೋಡಿದಮೇಲೆ ಅವಕಾಶವನ್ನು ಕೊಡುತ್ತೇನೆಂದು ಹೇಳತಕ್ಕಂಥದ್ದು ತರ್ಕಹೀನವಾಗುತ್ತದೆ. ಅದು ಕಾರ್ಯಸಾಧನವಾಗದ ವಿಚಾರ. ಇದರಲ್ಲಿ ಬಹಳ ಸರಳವಾದ ವಿಚಾರ ಇದೆ. ಸದಸ್ಯರು ಯಾರಮೇಲಾದರೂ ಏನಾದರೂ ಆರೋಪ ಮಾಡಿದರೆ ಅಂಥವರ ವ್ಯಕ್ತಿತ್ವಕ್ಕೆ ಧಕ್ಕೆತರತಕ್ಕಂಥ ಅಥವಾ ಉದ್ದೇಶಪೂರ್ವಕವಾಗಿ, ಅಥವಾ ಅನುದ್ದೇಶಪೂರ್ವಕವಾಗಿ ಈ ಸದನದಲ್ಲಿ ಬಂದಾಗ ಸಂಬಂಧಪಟ್ಟ ವ್ಯಕ್ತಿಗೆ ತನ್ನ ವಿವರಣೆ ಕೊಡುವುದಕ್ಕೆ ಅವಕಾಶ ಇರಬೇಕು ಎನ್ನುವುದು ಈ ರೂಲ್ಸ್‌ನಲ್ಲಿ ಇದೆ. ಆದ್ದರಿಂದ ಈ ಸದನದಲ್ಲಿರತಕ್ಕಂಥ ಸದಸ್ಯರ ಹಕ್ಕನ್ನು ಎತ್ತಿ ಹಿಡಿಯತಕ್ಕಂಥದ್ದು ತಮ್ಮ ಆದ್ಯಕರ್ತವ್ಯ ಮತ್ತು ಜವಾಬ್ದಾರಿ. ಕೋರ್ಟಿನಲ್ಲಿ ಕೂಡ ಯಾವುದಾದರೂ ಒಂದು ಕಾನೂನನ್ನು ಒಂದು ವ್ಯಕ್ತಿ ಅಥವಾ ಒಂದು ಗುಂಪಿನ ವ್ಯಕ್ತಿಗಳು ಅಥವಾ ಒಂದು ವರ್ಗಕ್ಕೆ ಸೇರಿರತಕ್ಕಂಥ ಜನಗಳ ಹಿತಕ್ಕೋಸ್ಕರವಾಗಿ ಕಾನೂನು ಮಾಡಿದ್ದರೆ, ಅದು ಏನಾದರೂ ಕೋರ್ಟಿಗೆ ಬಂದರೆ ಕೋರ್ಟಿನವರು ಏನು ಹೇಳುತ್ತಾರೆ ಎಂದರೆ.—

"Law will be interpreted in favour of achieving the purpose of the Legislation."

ಯಾವುದು ಉದ್ದೇಶ ಇದೆ, ಆ ಉದ್ದೇಶ ಈಡೇರುವುದರ ಪರವಾಗಿ ಯಾರಿಗೆ ಯಾವ ಹಕ್ಕುಬಾಧ್ಯತೆಯನ್ನು ಕೇಳುವುದಕ್ಕೆ ಅವಕಾಶ ಇದೆಯೋ, ಅದನ್ನು ಊರ್ಜಿತಗೊಳಿಸುವುದಕ್ಕೋಸ್ಕರ ಅರ್ಥೈಸುತ್ತಾರೆ ಹೊರತು ವಿರೋಧ ಮಾಡುವುದಿಲ್ಲ. ಈ ನಿಯಮ ಇರುವಾಗ ಮುಖ್ಯವಾಗಿ ಯಾವ ಸದಸ್ಯನಿಗೆ ಅನ್ಯಾಯವಾಗಿದೆಯೋ, ಅದಕ್ಕೆ ಪೂರಕವಾಗಿ ಆತನ ಹಕ್ಕನ್ನು ಎತ್ತಿ ಹಿಡಿಯುವುದಕ್ಕೆ ಮಾಡಬೇಕೇ ಹೊರತು ತದ್ವಿರುದ್ಧವಾಗಿ ಅರ್ಥ ಮಾಡಕೂಡದು. ಶಕ್ಧರ್ ಮತ್ತು ಕೌಲ್‌ರವರು ಕೂಡ ಹೇಳಿದ್ದಾರೆ.—

"This House is its own Master." With all due respect to Parliament I would like to say that we are not carbon copy of Parliament or any other House for that matter. We are our own masters. We have got our own House.

ಹೀಗೆ ಇರಬೇಕಾದರೆ ಈ ನಿಯಮ ಅತ್ಯಂತ ಸರಳವಾಗಿದೆ. ಆಕಸ್ಮಾತ್ತಾಗಿ ಈ ಹಿನ್ನೆಲೆಯಲ್ಲಿ ಇಂತಹ ಒಂದು ಸಂಪ್ರದಾಯವನ್ನು ಹಾಕತಕ್ಕಂಥಾದ್ದು ಇದ್ದರೆ, ಅದಕ್ಕೆ ಸಾಕಷ್ಟು ಸಮಯ ಬೇಕಾದರೆ ತೆಗೆದುಕೊಳ್ಳಿ. ಈ ರೂಲ್ಸಿನ ಬಗ್ಗೆ ಚರ್ಚೆ ಮಾಡೋಣ, ತಿದ್ದುಪಡಿ ಮಾಡೋಣ.

ಶ್ರೀ ಎಂ. ರಘುಪತಿ:—ನಿಮ್ಮ ಬಾಯಿಂದ ಈ ಮಾತು ಬರಬಾರದಾಗಿತ್ತು.

SRI K. H. SRINIVAS.—I said, 'with all due respect to Parliament, I submit that we are not carbon copy of any other House and much less to Parliament of India Even the Parliament is not acarbon copy of the House of Commons.....

ನಾನು ಹೇಳಿದ್ದು, ಯಾವ ರಾಜ್ಯಾಂಗ ಸಂಸತ್ತನ್ನು ನಿರ್ಮಾಣ ಮಾಡಿದೆಯೋ, ಅದೇ ರಾಜ್ಯಾಂಗದ ಅಡಿಯಲ್ಲಿ ನಾವು ಕೂಡ ಕೆಲಸ ಮಾಡುತ್ತಿದ್ದೇವೆ. ನೀವುಗಳೇ ಅನೇಕ ಸಲ ಹೇಳಿದ್ದೀರಿ. ಕೇಂದ್ರ ಸರ್ಕಾರ ಮೇಲ್ಮಡೆ ಇರುವ ಸರ್ಕಾರ, ನಮ್ಮದು ಕೆಳಗಡೆ ಇರುವ ಸರ್ಕಾರ ಎಂದು. Both of us are creations of Parliament. ಈ ನಿಯಮಾವಳಿಯನ್ನು ಆರ್ಥ್ಯಸಿ ಸನ್ಮಾನ್ಯ ಸಚಿವರು ಏನು ಹೇಳಿಕೆಯನ್ನು ಕೊಟ್ಟಿದ್ದಾರೆ, ಅದು ಈಗಿನ ಸಂದರ್ಭದಲ್ಲಿ ಮಾನ್ಯ ಬಂಗಾರಪ್ಪನವರು ಅವರ ಹಕ್ಕನ್ನು ಚಲಾಯಿಸುವುದಕ್ಕೆ ಬಿಡಬಾರದು ಎನ್ನುವ ಯಾವುದೋ ಒಂದು ಉದ್ದೇಶ ಇದ್ದ ಹಾಗಿದೆ. ಅವರ ಹಕ್ಕನ್ನು ನೀವು ಕಸಿದುಕೊಳ್ಳಬೇಕು ಎಂದು ಅಲ್ಲ. ಅದನ್ನು ಚಲಾಯಿಸಲಿಕ್ಕೇ ಬಿಡಬಾರದು ಎಂಬ ಅಭಿಪ್ರಾಯ ಇಲ್ಲಿ ಇರುವುದು. ಈ ಬುದ್ಧಿವಂತಿಕೆ ಬೇಡ. ನಮಗೆ ಗೊತ್ತಾಗುತ್ತದೆ.....

ಶ್ರೀ ಎ. ಲಕ್ಷ್ಮೀಸಾಗರ್.—ಖಂಡಿತವಾಗಿಯೂ ಇಲ್ಲ.

(ಗೊಂದಲ)

ಅಧ್ಯಕ್ಷರು.—ಶ್ರೀ ಶ್ರೀನಿವಾಸ್‌ರವರೇ, ಬೇಗ ಮುಗಿಸಿ.

ಶ್ರೀ ಕೆ. ಎಚ್. ಶ್ರೀನಿವಾಸ್.—ಅಧ್ಯಕ್ಷರೇ, ನಾನು ನನ್ನ ಮಾತುಗಳನ್ನು ಮುಗಿಸಂತ್ತೇನೆ. ಇಲ್ಲಿ ಮಾನ್ಯ ಮಂತ್ರಿಗಳು ಬೇರೆ ಯಾವುದೋ ಒಂದು ಹೇಳಿಕೆಯನ್ನು ಏನು ಓದಿದ್ದಾರೆ, ಅದರ ಪರಿಣಾಮ ಏನು ಆಗಿದೆಯೆಂಬುದನ್ನು ನೋಡಬೇಕು. ಈ ಪರಿಣಾಮದ ಬಗ್ಗೆ ವಿವರಣೆ ಕೊಡುವುದಕ್ಕೆ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಸಮಾನವಾದಂಥ ಹಕ್ಕು ಇದೆ. ಇದಕ್ಕೆ ಬೇರೆಯಾದ ವಿವರಣೆ ಕೊಟ್ಟು, ಈ ಹಕ್ಕನ್ನು ಹಾರಿಸುವುದಕ್ಕೆ ದಯವಿಟ್ಟು ಅವಕಾಶ ಮಾಡಿಕೊಡಬಾರದು. ಇವರು ಈ ರೀತಿ ಮಾಡುವುದನ್ನು ನೋಡಿದರೆ, ನಾವು ವಿವಾದರೂ ಅಲಿಗೇಶನ್ ಮಾಡಿದರೆ ಸರ್ಕಾರ ಹೆದರಿಕೊಳ್ಳಬೇಕು. ಇತ್ತೀಚೆಗಂತೂ ಇವರು ತುಂಬಾ ಹೆದರಿಕೊಳ್ಳುತ್ತಿದ್ದಾರೆ. ಆದರೆ ನಾವು ಒಂದು ವಿವರಣೆ ಕೊಟ್ಟರೂ ಕೂಡ ಏತಕ್ಕೆ ಹೆದರುತ್ತೀರಿ ? ಇದು ಯಾವ ಲೆಕ್ಕಾಚಾರ ? ಮಾನ್ಯ ಅಧ್ಯಕ್ಷರೇ, ತಾವು ವಿವರಣೆ ಕೊಡುವುದಕ್ಕೆ ದಯವಿಟ್ಟು ಅವಕಾಶ ಕೊಡಿ. ಆ ಮೇಲೆ, ಮಂತ್ರಿ ಏನಾದರೂ ಪಾಯಿಂಟ್ ಆಫ್ ಆರ್ಡರ್ ಹೊಳೆದರೆ ಇವರು ಹೇಳಲಿ.

ಅಧ್ಯಕ್ಷರು.—ನಾನು ರೂಲಿಂಗ್ ಕೊಡುತ್ತೇನೆ. ಈಗ ಶಾಸನಸಭೆಯ .....

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ನಾನು ಒಂದು ಮಾತನ್ನು ಹೇಳಬೇಕು. ನಾನು ಮಾನ್ಯ ಪೊಲೀಲಿಯವರು ಮಾತನಾಡುವಾಗ ಇಂಟರ್‌ವೀನ್ ಮಾಡಿ ಹೇಳಿದೆ. ಇಲ್ಲಿ ಯಾವಾಗ ಪರ್ಸನಲ್ ಎಕ್ಸ್‌ಪ್ಲನೇಶನ್ ಕೊಡಬಹುದು ಎಂದರೆ I refer to page 342 of the Pactice and procedure of Parliament by M. N. Kaul and S. L. Shakdher, which says thus :

> "Normally, if a Member during the course of debate makes any allegation in the House against another member or a Minister without giving advance notice thereof to the Speaker as required under the rule on the subject, the member is called to order. However, where any such allegations have gone on record, the Minister or the member against whom allegations have been made is allowed, on his request, to make a personal explanation in the House with a view to clarifying the position either on the same day or later on."

ಈ ವೈಯಕ್ತಿಕ ವಿವರಣೆಯನ್ನು ಯಾವಾಗ ಕೊಡಬಹುದು ? ಇಲ್ಲಿ ಒಬ್ಬ ಸದಸ್ಯರು ಮಂತ್ರಿಯ ವಿರುದ್ಧವಾಗಲೀ, ಮಂತ್ರಿಯು ಒಬ್ಬ ಸದಸ್ಯರ ವಿರುದ್ಧವಾಗಲೀ ಯಾವ ದೂರನ್ನೂ ಹೇಳಿಲ್ಲ. ಇಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರ ಹೇಲೆ ಯಾವ ತರಹದ ಅಲಿಗೇಶನ್ ಕೂಡ ಮಾಡಿಲ್ಲ. ಇವನ್ನು ಎಕ್ಸಪ್ಲನೇಶನ್ ಕೊಡತಕ್ಕಂಥ ಸಂದರ್ಭದಲ್ಲಿ here, the Hon'ble Minister has read the statement made by somebody during the investigation. I would have understood if one can object for reading the statement of certain matter appeared in the press or any-where. Before the hon'ble Minister started reading the statement or during the course of reading the statement they could have taken objection.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್. - ಆವತ್ತು ನಾವು ವಿರೋಧ ಮಾಡಿದ್ದೇವೆ.

SRI S. R. BOMMAI.—Here, only point for your consideration is, whether any allegation has been made by the hon'ble Minister, or not. When there is no allegation made by the Minister, then the question of giving personal explanation does not arise.

SRI K. H. PATIL.—What you have read just now, does not mention any binding on the part of the member to give personal explanation. It is upto the Member to consider whether personal explanation is necessary.

SRI S. R. BOMMAI —I don't come in the way of giving personal explanation The only question is, the hon'ble Minister has not made any allegation. A document has been read. You could have taken objection for reading that statement. At that time they could have sought ruling from the Hon'ble Speaker, before the statement is made or in the course of reading. If it is not permissible under the rule here, such a ruling has not been given by the Speaker.

(INTERRUPTIONS)

Some of the senior Members of the Opposition insisted upon the Minister that the statement should be made. That is also there on the record. It is a part of the Proceedings.

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್.—ಮಾನ್ಯ ಅಧ್ಯಕ್ಷರೇ, ಒಂದು ದಿನ ಮಾನ್ಯ ಬಂಗಾರಪ್ಪನವರು ಇದ್ದರು. ಮಾನ್ಯ ವಿರೋಧ ಪಕ್ಷದ ನಾಯಕರೂ ಕೂಡ ಇದ್ದರು. ನಾನು ಕೂಡ ಇದ್ದೆ. ಮೊದಲು ಆಗಿದ್ದು ಏನು ಎಂದರೆ ಶಿವಮೊಗ್ಗದಲ್ಲಿ ನಡೆದ ದರೋಡೆ ಬಗ್ಗೆ ರಾಜಕೀಯ ಪಕ್ಷಗಳ ಕೈವಾಡ ಇದೆಯೆಂದು ಪತ್ರಿಕೆಯಲ್ಲಿ ಬಂತು. ಅಲ್ಲಿ ನಿಲುವಳಿ ಸೂಚನೆ ಕೂಡ ಬಂದಿತ್ತು. ಆವಾಗ ನಿಲುವಳಿ ಸೂಚನೆ ಪ್ರಸ್ತಾಪಕ್ಕೆ ಬಂದಾಗ, ಇಂದು ಇದನ್ನು ಏತಕ್ಕೆ ತರುತ್ತೀರಿ ? ಮುಂಬೆ ಗಮನಸೆಳೆಯುವ ಸೂಚನೆ ಬರುತ್ತದೆ, ರಂಗನಾಥ ಆಯರ ಮೇಲೆ ಯಾರು ಕೆಲಸ ಮಾಡಿದ್ದಾರೆ ಎನ್ನುತಕ್ಕಂಥಾದ್ದು ಎಲ್ಲಾ ಬರುತ್ತದೆ, ಆಗ ನಾನು ಹೇಳುತ್ತೇನೆ ಎನ್ನುತಕ್ಕಂಥ ಮಾತನ್ನು ಪ್ರಸ್ತಾಪ ಮಾಡಿದರು. ಆವಾಗ ಶ್ರೀಯುತರುಗಳಾದ ಮಲ್ಲಿಕಾರ್ಜುನ ಖರ್ಗೆ, ಶ್ರೀನಿವಾಸ್, ಕೆ. ಎಚ್. ಪಾಟೀಲ್‌ರು ಕೇಳಿದ ಪ್ರಶ್ನೆಗಳಿಗೆ ಉತ್ತರ ಕೊಟ್ಟಮೇಲೆ ನಾನು ಎದ್ದುನಿಂತು ಕೇಳಿದೆ ಏನೋ ಹೇಳುತ್ತೇನೆ' ಎಂದು ಹೇಳಿದವರು ಏಕೆ ಹೇಳಲಿಲ್ಲ ? ಏಂದು ಏನಾದರೂ ತನಿಖೆ ನಡೆದಿದ್ದರೆ, ತೀರ್ಮಾನವಾಗಿದ್ದರೆ ಅವತ್ತೇ ಹೇಳಬಹುದಿತ್ತು. ಆದರೆ ಈಗ ಮಾನ್ಯ ವಿರೋಧ ಪಕ್ಷದ ನಾಯಕರು ಇರಲಾರದ್ದನ್ನು ನೋಡಿ ಇದನ್ನು ಮಾಡಿರತಕ್ಕಂಥದ್ದು ನಿಜವಾಗಿಯೂ ಇವರು ನಾಚಿಕೆ ಪಡಬೇಕು.

(ಗೊಂದಲ)

೬-೩೦ ಪಿ. ಎಂ.

ಶ್ರೀ ಬಿ. ರಾಚಯ್ಯ.—ಆ ದಿನ ನೀವುಗಳು ಹೇಳಿದ್ದೆಲ್ಲಾ ರೆಕಾರ್ಡ್ ಆಗಿದೆ. ಅದನ್ನು ಬೇಕಾದರೆ ತೆಗೆದು ನೋಡಿ.

(ಗೊಂದಲ)

ಶ್ರೀ ಧರ್ಮಸಿಂಗ್.—ಈ ರೀತಿ ಹೇಳಲು ನಿಮಗೆ ನಾಚಿಕೆ ಬರಬೇಕು.

(ಗೊಂದಲ)

ಶ್ರೀ ಎಂ. ವೀರಪ್ಪಮೊಯ್ಲಿ.—ಹಿರಿಯ ಸದಸ್ಯರಾದಂಥ ನೀವು ಈ ರೀತಿ ಹೇಳುವುದು ಸರಿಯಿಲ್ಲ.

(ಗೊಂದಲ)

ಅಧ್ಯಕ್ಷರು.—ದಯವಾಡಿ ಎಲ್ಲರೂ ಕುಳಿತುಕೊಳ್ಳಿ. ಎಲ್ಲರೂ ಒಟ್ಟಿಗೆ ಮಾತನಾಡಿದರೆ ಯಾರ ಮಾತೂ ರೆಕಾರ್ಡಿಗೆ ಹೋಗುವುದಿಲ್ಲ. ಈಗ ನಾನು ರೂಲಿಂಗ್ ಕೊಡುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅದಕ್ಕೆ ಮೊದಲು ನನ್ನ ಮಾತನ್ನು ಮುಗಿಸಿಬಿಡುತ್ತೇನೆ. ಇವೊತ್ತು ಮಾನ್ಯ ಧರ್ಮಸಿಂಗ್ ಅವರು ಬದಲಾವಣೆ ಆಗಿರಂಪಂತೆ ಕಾಣುತ್ತಿದೆ. ಆ ದಿನ ಮಾನ್ಯ ಧರ್ಮಸಿಂಗ್ ಅವರು, ಮಾನ್ಯ ಖಾರ್ಗೆ ಅವರು ಮತ್ತು ಮಾನ್ಯ ಶ್ರೀನಿವಾಸ್ ಅವರು ಗೃಹ ಮಂತ್ರಿಗಳಿಗೆ ಓದಿ ಓದಿ ಎಂದು ಒತ್ತಾಯ ಮಾಡಿದರು. ಆದರೆ ಇವೊತ್ತು ಅವರುಗಳಲ್ಲಿ ಬದಲಾವಣೆ ಆಗಿರಂಪಂತೆ ಕಾಣುತ್ತಿದೆ.

ಶ್ರೀ ಧರ್ಮಸಿಂಗ್.—ಬದಲಾವಣೆ ಏನೂ ಆಗಿಲ್ಲ. ನಾವು ಕೇಳಿದ ದಿನವೇ ಏತಕ್ಕೆ ಓದಲಿಲ್ಲ. ಆ ದಿನ ವಿರೋಧಪಕ್ಷದ ನಾಯಕರು ಸಭೆಯಲ್ಲಿ ಇದ್ದರೆಂಬ ಕಾರಣದಿಂದ ಓದಲಿಲ್ಲವೇ ಹೇಗೇ ?

ಶ್ರೀ ಎಂ. ಪಂಲ್ಲಿಕಾರ್ಜುನ ಖಿರ್ಗೆ.—ಈ ಬಗ್ಗೆ ನಾವು ಕೆಲವರು ಗಮನ ಸೆಳೆಯುವ ಸೂಚನೆ ಮೂಲಕ ಪ್ರಸ್ತಾಪ ಮಾಡಿದಾಗ ಮಾನ್ಯ ಮಂತ್ರಿಗಳು ಇನ್ನೂ ತನಿಖೆ ನಡೆಯಂತ್ತಿರುವ ಕಾರಣದಿಂದ ಹೆಚ್ಚು ಮಾತನಾಡುವ ಅಗತ್ಯವಿಲ್ಲವೆಂದು ಹೇಳಿದರು. ಆದರೆ ಓದಿದ ಹೇಳಿಕೆಯನ್ನು ಮಾತ್ರ ಆ ದಿನ ತಮ್ಮ ಪಕ್ಕದಲ್ಲಿಯೇ ಇಟ್ಟುಕೊಂಡಿದ್ದರು. ಮೊನ್ನೆ ಅವರ ಇಲಾಖಾ ಬೇಡಿಕೆಗಳ ಮೇಲೆ ಉತ್ತರ ಕೊಡುವ ಸಂದರ್ಭದಲ್ಲಿ ಸಹ ಆ ಒಂದು ಹೇಳಿಕೆಯನ್ನು ತಮ್ಮ ಪಕ್ಕದಲ್ಲಿಯೇ ಇಟ್ಟುಕೊಂಡಿದ್ದರು. ಆ ದಿನವೂ ಸಹ ಅವರಿಗೆ ಸ್ವಿಚ್ ಹಾಕುವುದಕ್ಕೆ ತೊಂದರೆಯಾಗಿತ್ತು. ಆದರೆ ಮುಖ್ಯಮಂತ್ರಿಗಳೇ ಸ್ವಿಚ್ ಹಾಕಿದರು. ಮುಖ್ಯಮಂತ್ರಿಗಳು ಇವರಿಗೆ ಏನೋ ಹೇಳಿದರು. ನಂತರ ಇವರು ಅದನ್ನು ಇಲ್ಲಿ ಓದಿದರು. ಇಂತಹ ಹೇಳಿಕೆಗಳನ್ನು ಇಲ್ಲಿ ಓದಿ ನಮ್ಮನಮ್ಮಲ್ಲಿಯೇ ಭೇದಭಾವ ಮೂಡಿಸಲು ತಾವು ಪ್ರಯತ್ನಿಸಬೇಡಿ.

(ಗೊಂದಲ)

ಶ್ರೀ ಡಿ. ಟಿ. ಜಯಕುಮಾರ್.—ವಾರ ಪತ್ರಿಕೆಯಲ್ಲಿ ಇವರ ಬಗ್ಗೆಯೇ ಬಂದಂಥ ವಿಚಾರಗಳ ಬಗ್ಗೆ ಏತಕ್ಕೆ ಹೇಳಿಕೆ ಕೊಡಲಿಲ್ಲ ?

ಅಧ್ಯಕ್ಷರು.—ದಯವಾಡಿ ಎಲ್ಲರೂ ಕುಳಿತುಕೊಳ್ಳಿ ನಾನು ರೂಲಿಂಗ್ ಕೊಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ,

ಅಧ್ಯಕ್ಷರು.—ಈಗಾಗಲೇ ಈ ಕ್ರಿಯಾಲೋಪದ ಬಗ್ಗೆ ಸಾಕಷ್ಟು ಹೇಳಿದ್ದಾರೆ. ಆದ್ದರಿಂದ ಇದನ್ನು ಇಲ್ಲಿಗೆ ಮುಂಕ್ತಾಯ ಮಾಡೋಣ. ನಾನು ರೂಲಿಂಗ್ ಕೊಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ನಾನೂ ಸಹ ಆ ಕ್ರಿಯಾಲೋಪದ ಬಗ್ಗೆ ಮಾತ್ರ ಹೇಳುತ್ತೇನೆ, ಅನೇಕ ಮಾನ್ಯ ಸದಸ್ಯರು ಈಗಾಗಲೇ ವಿವರವಾಗಿ ಮಾತನಾಡಿರುವುದರಿಂದ ನಾನು ಹೆಚ್ಚು ಹೇಳುವ ಅವಶ್ಯಕತೆ ಇದೆ ಎಂದು ಭಾವಿಸುವುದಿಲ್ಲ. ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ಎರಡು ವಿಚಾರಗಳ ಮೇಲೆ ಎತ್ತಿರುವ ಕ್ರಿಯಾಲೋಪದ ಬಗ್ಗೆ ಮಾತ್ರ ನಾನು ಹೇಳುತ್ತೇನೆ. ಮಾನ್ಯ ವೀರಪ್ಪ ಮೊಯ್ಲಿ ಅವರು ತಮ್ಮ ವಾದವನ್ನು ಮುಂಡನೆ ಮಾಡಿದ ನಂತರ ಮಾನ್ಯ ಮುಖ್ಯಮಂತ್ರಿಗಳು ಏನು

ಹೇಳಿದರು, ಆದಕ್ಕೂ ಮೊದಲು ಶ್ರೀ ಲಕ್ಷ್ಮೀಸಾಗರ್ ಅವರು ಹೇಳಿದಂಥ ಒಂದು ಮಾತು ರೆಕಾರ್ಡಿಗೆ ಹೋಗಿದೆ. ಅವರು ಹೇಳಿದ್ದೇನೆಂದರೆ, ಇಲ್ಲಿ ಯಾವ ಸದಸ್ಯರ ಮೇಲೆಯೇ ಆಗಲಿ, ಏನಾದರು ಆಪಾದನೆ ಬಂದರೆ, ಅದು ಯಾವ ರೂಪದಲ್ಲಿಯೇ ಇದ್ದರೂ ಸಹ, ಆ ಬಗ್ಗೆ ಇಲ್ಲಿ ವೈಯಕ್ತಿಕವಾಗಿ ವಿವರಣೆ ಕೊಡುವಂತಹ ಹಕ್ಕು ಆ ಸದಸ್ಯರಿಗೆ ಇದೆ ಎಂಬುದನ್ನು ಮೂಲತಃ ಒಪ್ಪಿಕೊಂಡಿದ್ದಾರೆ. ಆದರೆ ಆ ಹೇಳಿಕೆಯನ್ನು ಬರವಣಿಗೆ ಮೂಲಕ ಕೊಡಬೇಕು ಮತ್ತು ಆ ಬಗ್ಗೆ ಮೊದಲೇ ತಮ್ಮ ಅನುಮತಿ ತೆಗೆದುಕೊಂಡಿರಬೇಕೆಂದು ಹೇಳಿದ್ದಾರೆ. ಆದರೆ ನಿಯಮ ೩೧೫ ರ ಪ್ರಕಾರ ತಮ್ಮ ಅನುಮತಿ ಪಡೆದು ಇಲ್ಲಿ ವೈಯಕ್ತಿಕ ವಿವರಣೆ ಕೊಡಬಹುದೆಂದು ಮತ್ತು ಈ ನಿಯಮದ ಪ್ರಕಾರ ಕೊಡತಕ್ಕಂಥ ವಿವರಣೆಯನ್ನು ಬರವಣಿಗೆಯಲ್ಲಿ ಮೊದಲೇ ಕೊಡುವ ಅಗತ್ಯವಿಲ್ಲವೆಂದು ಮಾನ್ಯ ವೀರಪ್ಪ ಮೊಯ್ಲಿ ಅವರು ತಮಗೆ ವಿವರಣೆ ಕೊಟ್ಟಾಗ ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ಬರವಣಿಗೆಯ ಮೂಲಕ ತಮ್ಮ ಅನುಮತಿ ಪಡೆದು ಕೊಡಬೇಕೆಂದು ತಿಳಿಸಿದರು. ಆದರೆ ೧೯೭೨ನೇ ಇಸವಿಯಿಂದ ಇಲ್ಲಿಯವರೆಗೆ ಆ ರೀತಿ ನಡೆದಿಲ್ಲ. ಈ ಹಿಂದೆ ಕೂಡ ಈ ರೀತಿ ನಡೆದಿಲ್ಲ. ಆದರೆ ಮಾನ್ಯ ಮಂಖ್ಯಮಂತ್ರಿಗಳು ಈ ಹಿಂದೆ ಶ್ರೀ ವೈಕುಂಠಬಾಳಿಗಾ ಅವರು ಅಧ್ಯಕ್ಷರಾಗಿದ್ದಾಗ ವೈಯಕ್ತಿಕ ವಿವರಣೆಯನ್ನು ಬರವಣಿಗೆ ಮಂಖಾಂತರವೇ ಕೊಡತಕ್ಕ ಪದ್ಧತಿ ಇತ್ತು ಎಂದು ತಮ್ಮ ಅಭಿಪ್ರಾಯ ವನ್ನು ವ್ಯಕ್ತಪಡಿಸಿದರು, ಈ ಹಿಂದೆ ಸಹ ಇಲ್ಲಿ ಮಾನ್ಯ ಕೆ.ಎಚ್.ಶ್ರೀನಿವಾಸ್ ಅವರು ಸದಸ್ಯರಾಗಿದ್ದರು. ನಾನು ಸಹ ಇಲ್ಲಿ ಬಹಳ ಹಿಂದಿನಿಂದ ಸದಸ್ಯನಾಗಿದ್ದೇನೆ. ಆದ್ದರಿಂದ ನಮಗೆಲ್ಲಾ ತಿಳಿದಂತೆ ಆ ರೀತಿ ನಡೆದಿಲ್ಲ. ಒಂದುವೇಳೆ ಶ್ರೀ ಬಾಳಿಗಾ ಅವರ ಕಾಲದಲ್ಲಿ ಆ ರೀತಿ ನಡೆದಿದ್ದರೆ, ಯಾರು ಆ ರೀತಿ ಆಗಿನ ಅಧ್ಯಕ್ಷರ ಅನುಮತಿ ಪಡೆದು ವೈಯಕ್ತಿಕ ವಿವರಣೆಯನ್ನು ಬರವಣಿಗೆ ಮೂಲಕ ಕೊಟ್ಟಿದ್ದರೇ ಎಂಬುದನ್ನು ತಾವು ನೋಡಬೇಕಾಗುತ್ತದೆ. ಆದಕ್ಕೆ ತಮಗೆ ಕಾಲಾವಕಾಶ ಬೇಕಾಗುತ್ತದೆ ಆದ್ದರಿಂದ ಈ ಹಿಂದಿನ ನಡವಳಿಕೆಗಳನ್ನು ನೋಡಿ ತಾವು ರೂಲಿಂಗ್ ಕೊಡುವುದು ಅವಶ್ಯಕವೆಂದು ನಾನು ಭಾವಿಸುತ್ತೇನೆ. ಮತ್ತೊಂದು ವಿಚಾರವೆಂದರೆ, ೧೯೬೭ರಲ್ಲಿ ನಮ್ಮ ಈ ಒಂದು ಅವಧಿ ಮುಗಿಯುವುದಕ್ಕೆ ಮೊದಲು ಶ್ರೀ ಬಾಳಿಗಾ ಅವರು ನಿಧನರಾದ ಮೇಲೆ ಶ್ರೀ ಕೊಠಾವಳೆ ಅವರು ಇಲ್ಲಿ ಅಧ್ಯಕ್ಷರಾಗಿದ್ದಾಗ ಏನಾದರು ಅವರು ಈ ಬಗ್ಗೆ ರೂಲಿಂಗ್ ಕೊಟ್ಟಿರಬಹುದೆಂದು ಕಾಣುತ್ತದೆ. ಆ ಸಂದರ್ಭದಲ್ಲಿ ಇಲ್ಲಿ ಯಾರೂ ಸಹ ಕ್ರಿಯಾಲೋಪದ ಮೂಲಕ ಪ್ರಸ್ತಾಪ ಮಾಡದಿದ್ದರೂ ಸಹ ಅವರು ಇಂತಹ ಒಂದು ನಿಯಮವನ್ನು ಜಾರಿಗೆ ತಂದಿರಬಹುದೆಂದು ಕಾಣುತ್ತದೆ. ಆದ್ದರಿಂದ ತಾವು ಹಿಂದಿನ ದಾಖಲೆಗಳನ್ನು ನೋಡಬೇಕಾಗುತ್ತದೆ. ಆದರೆ ನನಗೆ ಜ್ಞಾಪಕವಿರುವಂತೆ ಇಲ್ಲಿ ಯಾರೂ ಸಹ ಬರವಣಿಗೆ ಮೂಲಕ ತಮ್ಮ ವೈಯಕ್ತಿಕ ಹೇಳಿಕೆಯನ್ನು ಕೊಟ್ಟಿಲ್ಲ. ಒಂದು ವೇಳೆ ಮಾನ್ಯ ಮಂಖ್ಯಮಂತ್ರಿಯವರಿಗೆ ಅಂತಹ ನೆನಪು ಏನಾದರು ಇದ್ದರೆ, ಅದು ಯಾವ ಸಂದರ್ಭದಲ್ಲಿ ಎಂದು ಹೇಳಲಿ.

ಶ್ರೀ ರಾಮಕೃಷ್ಣಹೆಗಡೆ.—ಶ್ರೀ ವೈಕುಂಠ ಬಾಳಿಗಾರವರು ಹಿಂದೆ ಅಧ್ಯಕ್ಷರಾಗಿದ್ದಾಗ, ಶ್ರೀಮತಿ ಯಶೋಧರ ದಾಸಪ್ಪನವರು ತಮ್ಮ ಮಂತ್ರಿ ಪದವಿ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಹೇಳಿಕೆಯನ್ನು ಕೊಡುತ್ತೇನೆ ಎಂದಾಗ ಶ್ರೀ ವೈಕುಂಠ ಬಾಳಿಗಾರವರು, ಹೇಳಿಕೆಯನ್ನು ಕೊಡುವ ಮೊದಲು, ಲಿಖಿತದ ಒಂದು ಪ್ರತಿಯನ್ನು ಅಧ್ಯಕ್ಷರಿಗೆ ಮುಂಚಿತವಾಗಿಯೇ ಕೊಡಬೇಕೆಂದು, ಹೇಳಿದ್ದರು. ಅದು ನನಗೆ ಇನ್ನೂ ನೆನಪಿನಲ್ಲಿ ಇದೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೇ, ಯಾವುದೇ ಒಬ್ಬ ಮಾನ್ಯ ಸದಸ್ಯರು ಇರಬಹುದು, ಅಥವಾ ಮಂತ್ರಿಯವರು ಇರಬಹುದು, ಅವರು ಮಂತ್ರಿಮಂಡಲದಿಂದ ಹೊರಗೆ ಬರತಕ್ಕ ಸಂದರ್ಭದಲ್ಲಿ ರಾಜೀನಾಮೆ ಕೊಡಬೇಕು. ರಾಜೀನಾಮೆ ಕೊಟ್ಟು ಹೇಳಿಕೆಯನ್ನು ಕೊಡುವ ಬಗ್ಗೆ ವಿಯಮಾವಳಿಯಲ್ಲೆ ಇದೆ. ಅದರ ಪ್ರಕಾರ ಶ್ರೀಮತಿ ಯಶೋಧರ ದಾಸಪ್ಪನವರಿಗೆ ಆಗಿನ ಅಧ್ಯಕ್ಷ ರಾಗಿದ್ದ ಶ್ರೀ ವೈಕಂಠ ಬಾಳಿಗರವರು ಹೇಳಿದ್ದಾರೆ. ಅದು ಸರಿ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಮಂತ್ರಿಗಳು ರಾಜೀನಾಮೆ ಕೊಟ್ಟ ಮೇಲೆ, ಅವರು ಹೇಳಿಕೆ ಯನ್ನು ಕೊಡ ಬಯಸಿದರೆ, ಹೇಳಿಕೆಯ ಪ್ರತಿಯನ್ನು ಮುಂಚಿತವಾಗಿಯೇ ಅಧ್ಯಕರಿಗೆ ತಲುಪಿಸಿರಬೇಕು ಎಂದು ರೂಲ್‌ನಲ್ಲೇ ಇದೆಯಲ್ಲಾ. ಮಂತ್ರಿಗಳಿಗೆ ಪ್ರತ್ಯೇಕವಾದ ನಿಯಮವಿದೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೇ, ರೂಲ್ ೧೬೭ ಕ್ಲಾಸ್ ಒಂದರಲ್ಲಿ ಏನು ಹೇಳಿದೆ ಎಂದರೆ,

"A member who has resigned the office of Minister may, with the consent of the Speaker make a personal statement in explanation of his resignation.

(2) A copy of the statement shall be forwarded to the speaker and the Leader of the House one day in advance of the day on which it is proposed to be made.

Provided that in the absence of a written statement the points or the gist of such statement shall be conveyed to the Speaker and the Leader of the House one day in advance of the day on which it is proposed to be made.

(3) Such a statement shall be made after questions and before list of business for the day is entered upon.

(4) There shall be no debate on such statement, but after it has been made, a Minister may make a statement pertinent thereto."

ಇದರಿಂದ ಸ್ಪಷ್ಟವಾಗಿ ಗೊತ್ತಾಗುತ್ತದೆ. ಈ ನಿಯಮಾವಳಿಯಲ್ಲಿ ಮಂತ್ರಿಮಂಡಲದ ಸದಸ್ಯರೊಬ್ಬರು, ಮಂತ್ರಿ ಮಂಡಲದಿಂದ ಹೊರಗಡೆ ಬಂದ ಮೇಲೆ, ಯಾವ ರೀತಿಯಾಗಿ ಸದನದಲ್ಲಿ, ಅಂದರೆ ಅಧ್ಯಕ್ಷರ ಅಪ್ಪಣೆ ಮೇರೆಗೆ, ಹೇಳಿಕೆಯನ್ನು ಕೊಡುವ ಅವಶ್ಯಕತೆ ಇದ್ದರೆ ಕೊಡಬಹುದು ಎಂದು ಇದೆ. ಚಾಪ್ಟರ್ ೧೮ರಲ್ಲಿ ಅಂದರೆ ರೂಲ್ ೧೬೦ರಲ್ಲಿ ಸಂಪೂರ್ಣವಾದ ವಿವರಣೆ ಇರತಕ್ಕ ವಿಚಾರ ತಮಗೂ ಗೊತ್ತಿದೆ. ಆದರೆ ಇಲ್ಲಿ ಪರ್‌ಸನಲ್ ಅಲಿಗೇಷನ್ ಬಂದಾಗ ನಿಯಮ ೩೧೫ ಮಾತ್ರ ಅನ್ವಯವಾಗುತ್ತದೆ. ಬೇರೆ ರೂಲ್ ಬರುವುದಕ್ಕೆ ಕಾರಣ ಇಲ್ಲ. ಮಾನ್ಯ ಮುಖ್ಯ ಮಂತ್ರಿಯವರು, ಶ್ರೀಮತಿ ಇಂಶೋದರ ದಾಸಪ್ಪನವರು ರಾಜೀನಾಮೆ ಕೊಟ್ಟ ಮೇಲೆ ಹೇಳಿಕೆ ಕೊಡುವ ವಿಚಾರದ ಬಗ್ಗೆ ಹೇಳಿದ್ದಾರೆ. ಶ್ರೀಮಾನ್ ಬಾಳಿಗಾರವರು ಈ ಸದನದಲ್ಲಿ ಅಧ್ಯಕ್ಷರಾಗಿದ್ದಂತಹ ಕಾಲದಲ್ಲಿ ಯಶೋದರ ದಾಸಪ್ಪ ಅವರು ಮಂತ್ರಿಯಾಗಿದ್ದರು. ಅವರು ತಮ್ಮ ಮಂತ್ರಿ ಪದವಿಗೆ ರಾಜೀನಾಮೆ ಕೊಟ್ಟ ಮೇಲೆ ಅವರು ತಮ್ಮ ಹೇಳಿಕೆಯನ್ನು ಕೊಡುವಾಗ ಶ್ರೀಮಾನ್ ವೈಕುಂಠಬಾಳಿಗಾರವರು ಹೇಳಿಕೆಯ ಪ್ರತಿಯನ್ನು ಮೊದಲೇ ಕೊಡಬೇಕಾಗಿತ್ತು ಎಂದು ತಿಳಿಸಿರಬಹುದು. ಪರ್‌ಸನಲ್ ಅಲಿಗೇಷನ್ ಮಾಡಿದಾಗ ಪೂರ್ವಭಾವಿಯಾಗಿ ಲಿಖಿತ ಪ್ರತಿಯನ್ನು ಕಳುಹಿಸಿಕೊಡಬೇಕು ಎನ್ನುವ ಕಾಯಿದೆ ಆಗಲೂ ಇರಲಿಲ್ಲ. ಮುಖ್ಯ ಮಂತ್ರಿಯವರು ಹೇಳಿರುವುದು, ಅಂದು ನಡೆದ ವಿಷಯಕ್ಕೂ ಈ ದಿನ ಎತ್ತಿರತಕ್ಕ ವಿಷಯಕ್ಕೂ ಸಂಪರ್ಕ ಇಲ್ಲದೇ ಇರತಕ್ಕ ವಾದವಾಗಿದೆ. ಈ ವಾದವನ್ನು ಸಂಪೂರ್ಣವಾಗಿ ತಾವು ಬದಿಗೊತ್ತಿ ಇದರ ಬಗ್ಗೆ ವಿಚಾರ ಮಾಡಬೇಕಾಗುತ್ತದೆ. ನಾನು ನಿಮ್ಮ ಅನುಮತಿಯನ್ನು ಪಡೆದೇ ಇದನ್ನು ಓದುತ್ತೇನೆ. ತಾವು ಸಮಯಕ್ಕೆ ಕಳುಹಿಸಿರುವ ಸುತ್ತೋಲೆಯಲ್ಲಿ ಇದರ ಬಗ್ಗೆ ಲಿಖಿತ ಮಾಹಿತಿ ಕಳುಹಿಸಿಕೊಡಬೇಕೆಂದು ಇದೆ. ನಿಯಮಾವಳಿಗಳು ಹೇಳುವ ಪ್ರಕಾರ ಪರ್‌ಸನಲ್ ಅಲಿಗೇಷನ್ ಬಂದಾಗ ಯಾವಾಗ ಬೇಕಾದರೂ ಹೇಳಿಕೆಯನ್ನು ಕೊಡಬಹುದೆಂದು ಹೇಳುತ್ತೇನೆ. ಈ ನಿಯಮಾವಳಿಗಳ ವಿರುದ್ಧ ತಾವು ತೀರ್ಪನ್ನು ಕೊಡಬಾರದೆಂದು ನಾನು ವಿನಂತಿ ಮಾಡುತ್ತೇನೆ. ಒಂದು ವೇಳೆ ಈ ಕಾನೂನುಗಳನ್ನೇ ಬದಲಾವಣೆ ಮಾಡಬೇಕು ಎಂದರೆ, ಅದು ತಕ್ಷಣಕ್ಕೆ ಆಗುವುದಿಲ್ಲ. ಅದಕ್ಕೆ ಒಂದು ಕಮಿಟಿಯನ್ನು ಮಾಡಬೇಕಾಗುತ್ತದೆ. ಆ ಕಮಿಟಿ ಎಲ್ಲಾ ಕಾನೂನುಗಳನ್ನು ಅಧ್ಯಯನ ಮಾಡಿ ಸದನಕ್ಕೆ ರಿಪೋರ್ಟ್ ಮಾಡಬೇಕಾಗುತ್ತದೆ. ಆ ಮೇಲೆ ಸದನವು ಅದನ್ನು ಅಂಗೀಕರಿಸುವುದೋ ಬಿಡುವುದೋ ಮಾಡುತ್ತದೆ. ಸದಸ್ಯರಿಗೆ ಸಂಪೂರ್ಣ ಹಕ್ಕು ಇದೆ. ಪರ್‌ಸನಲ್ ಅಲಿಗೇಷನ್ ಬಂದಾಗ, ಹೇಳಿಕೆಯನ್ನು ಕೊಡಬೇಕಾದರೆ. ಮೊದಲೇ ಹೇಳಿಕೆಯ ಪ್ರತಿಯನ್ನು ಅಧ್ಯಕ್ಷರಿಗೆ ಕೊಡಬೇಕು ಎನ್ನುವ ವಾದವನ್ನು ನಾನು ಮೊಟ್ಟಮೊದಲ ಬಾರಿಗೆ ನನ್ನ ೧೭-೧೮ ವರ್ಷದ ಅನುಭವದಲ್ಲಿ ನೋಡಿದ್ದೇನೆ. ಈ ರೀತಿಯ ಸುತ್ತೋಲೆ ಎಂದೂ ಬಂದಿರಲಿಲ್ಲ. ಮಾನ್ಯ ಸಚಿವರುಗಳೇ ಇರಬಹುದು, ಮಾನ್ಯ ಸದಸ್ಯರುಗಳೇ ಇರಬಹುದು, ಆ ಪಕ್ಷ, ಈ

ಪಕ್ಷ ಎನ್ನುವ ಪ್ರಶ್ನೆ ಇಲ್ಲಿ ಬರುವುದಿಲ್ಲ. ನಿಯಮಾವಳಿಗಳಿಗೆ ಯಾವುದೇ ಪಕ್ಷದ ಮೇಲೆ ಹಿಡಿತ ಇರುವುದಿಲ್ಲ. ಮಂತ್ರಿಮಂಡಲದವರು ನಮ್ಮ ಮೇಲೆ ಆಪಾದನೆ ಮಾಡಿದರೆ ನಾವು ಅದಕ್ಕೆ ವೈಯಕ್ತಿಕವಾಗಿ ವಿವರಣೆಯನ್ನು ಕೊಡಲೇಬೇಕಾಗುತ್ತದೆ. ನಿಜ ಹೇಳಬೇಕು ಎಂದರೆ, ಬರವಣಿಗೆ ಮೂಲಕ ಪತ್ರವನ್ನು ಅಧ್ಯಕ್ಷರಿಗೆ ಕಳುಹಿಸಿಕೊಟ್ಟಿರುವ ಉದಾಹರಣೆಗಳು ಅಪರೂಪ. ಮೊನ್ನೆ ದಿವಸ ಮಾನ್ಯ ನಜೀರ್‌ಸಾಬ್‌ರವರು ಹೇಳಿಕೆ ಕೊಟ್ಟರು, ಮಾನ್ಯ ವೆ. ಕೆ. ರಾಮಯ್ಯನವರು ಹೇಳಿಕೆ ಕೊಟ್ಟರು. ಇವರು ನಿಮಗೆ ಮುಂಚಿತವಾಗಿಯೇ ಹೇಳಿಕೆಯ ಪ್ರತಿಗಳನ್ನು ಕೊಟ್ಟಿದ್ದರೇ? ನಾನು ಸದನದಲ್ಲಿ ಇಲ್ಲದೇ ಇರುವಾಗ ನನ್ನ ಮೇಲೆ ಆಪಾದನೆ ಬರುವ ರೀತಿಯಲ್ಲಿ ಸದನದಲ್ಲಿ ಮಂತ್ರಿಗಳು ಹೇಳಿಕೆಯನ್ನು ಕೊಟ್ಟಿದ್ದಾರೆ. ಆ ಹೇಳಿಕೆಗೆ ಪ್ರತಿಯಾಗಿ ನಾನು ವೈಯಕ್ತಿಕವಾದ ವಿವರಣೆಯನ್ನು ಕೊಡಬೇಕಾಗಿದೆ. ಪೂರ್ವಬಾವಿಯಾಗಿ ನೀವು ಬರವಣಿಗೆ ಮೂಲಕ ಪ್ರತಿಯನ್ನು ಕೊಡಬೇಕು ಎಂದರೆ ಹೇಗೆ ಸಾಧ್ಯ? ಆದ್ದರಿಂದ, ತಾವುಗಳು ನನಗೆ ಹೇಳಿಕೆಯನ್ನು ಕೊಡುವುದಕ್ಕೆ ಅವಕಾಶ ಮಾಡಿಕೊಡಬೇಕು.

ಶ್ರೀ ಡಿ. ಟಿ. ಜಯಕುಮಾರ್.—ಮಾನ್ಯ ಮಂತ್ರಿಯವರು ಹೇಳಿಕೆ ಕೊಟ್ಟು ೩ ದಿನಗಳಾಯಿತು. ಮೊದಲೇ ಏಕೆ ನೀವು ಹೇಳಿಕೆಯನ್ನು ಕೊಡಲಿಲ್ಲ? ಆಗಲೇ ತಾವು ವಿರೋಧ ಮಾಡಬೇಕಾಗಿತ್ತು ಸ್ವಾಮಿ.

ಅಧ್ಯಕ್ಷರು.—ತಾವು ಕೂಡ್ರಿ.

ಶ್ರೀ ಎಸ್. ಬಂಗಾರಪ್ಪ.—ಆದ್ದರಿಂದ ಮಾನ್ಯ ಸಭಾಧ್ಯಕ್ಷರೇ ಹೇಳಿಕೆಯನ್ನು ಕೊಡುವ ಬಗ್ಗೆ ನಾನು ಒಂದೇ ಒಂದು ವಿಚಾರವನ್ನು ಹೇಳುತ್ತೇನೆ. ನಾನು 'ಕೌಲ್ ಅಂಡ್ ಶಕ್ಧರ್'ರವರು ಬರೆದಿರುವ ಪಾರ್ಲಿಮೆಂಟರಿ ಕಾನೂನು ಪುಸ್ತಕವನ್ನೂ ಓದಿದ್ದೇನೆ. ಅದರಲ್ಲೂ ಸಹ ಹೇಳಿಕೆಯನ್ನು ಕೊಡುವಾಗ ಪೂರ್ವಬಾವಿಯಾಗಿ ಪ್ರತಿಯನ್ನು ಅಧ್ಯಕ್ಷರಿಗೆ ಕೊಡಬೇಕೆಂದು ಇಲ್ಲ. ಆದ್ದರಿಂದ ನೀವು ಹೇಳುವ ಪ್ರಶ್ನೆ ಇಲ್ಲಿ ಉದ್ಬವಿಸುವುದಿಲ್ಲ. ಸದನದಲ್ಲಿ ನಾವು ಮೊದಲಿನಿಂದಲೂ ಒಳ್ಳೆಯ ಸಂಪ್ರದಾಯಗಳನ್ನು ಹಾಕಿಕೊಂಡು ಬಂದಿದ್ದೇವೆ. ಇದು ನಂಬಿಕೆ ನೀತಿಯಾದ ಪ್ರಶ್ನೆಯಾಗಿದೆ. ಸಂಪ್ರದಾಯಗಳನ್ನು ಮುರಿಯುವುದು ಬೇಡ. ನಾವು ಆ ಕಡೆ ಇದ್ದಾಗಲೂ ಯಾವ ಸಂಪ್ರದಾಯವನ್ನು ಮುರಿದಿರಲಿಲ್ಲ. ಇವತ್ತು ಅವರು ಆ ಕಡೆ ಇರಬಹುದು, ನಾಳೆ ಬೇರೆಯವರು ಇರಬಹುದು, ಆದ್ದರಿಂದ ಸಂಪ್ರದಾಯಗಳನ್ನು ಮುರಿಯುವುದು ಬೇಡ. ಆದ್ದರಿಂದ ನಿಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಹಿಂದಿನಿಂದ ನಿಯಮಾವಳಿಗಳ ಪ್ರಕಾರ ನಡೆದುಕೊಂಡು ಬಂದಿರುವ ಸಂಪ್ರದಾಯವನ್ನು ಮುರಿದು ಅದನ್ನು ನಮ್ಮ ಮೇಲೆ ಅಥವಾ ನಮ್ಮ ಪಕ್ಷದ ಮೇಲೆ ಅನ್ವಯವಾಗುವಂತೆ ಮಾಡುವುದು ಅಷ್ಟೊಂದು ಸೂಕ್ತವಲ್ಲವೆಂದು ನನ್ನ ಅಭಿಪ್ರಾಯ ಇದೆ. ಈಗ ಕೊಟ್ಟಿರುವ ಅಥವಾ ಕೊಡುವ ತೀರ್ಪನ್ನು ಪುನಃ ಪರಿಶೀಲನೆ ಮಾಡಿ ತೀರ್ಪನ್ನು ಕೊಡಿ. ನಮಗೆ ವಿರುದ್ಧವಾಗಿ ನಿರ್ಣಯವನ್ನು ತೆಗೆದುಕೊಂಡರೆ ಅದು ಅಷ್ಟೊಂದು ಉತ್ತಮವಾಗಲಾರದು ಎನ್ನುವುದು ನಮ್ಮ ಅಭಿಪ್ರಾಯ. ಮಾನ್ಯ ಕಾನೂನು ಸಚಿವರು ಎತ್ತಿರತಕ್ಕಂಥ ಕ್ರಿಯಾಲೋಪಕ್ಕೆ ನಾನು ಈ ತೀರ್ಪನ್ನು ಕೊಡುವವನಿದ್ದೇನೆಂದು ತಾವು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದೀರಿ. ಆದ್ದರಿಂದ ನಿಮ್ಮ ತೀರ್ಪನ್ನು ಪುನಃ ಪರಿಶೀಲಿಸಬೇಕು. ಮತ್ತೊಂದು ವಿಷಯವನ್ನು ತಮ್ಮ ಗಮನಕ್ಕೆ ತರುವುದೇನೆಂದರೆ, ತಾವು ಕಳುಹಿಸಿಕೊಟ್ಟಿರತಕ್ಕಂಥ ಸುತ್ತೋಲೆಯಲ್ಲಿ ಮೊನ್ನೆ ಮಾನ್ಯ ಗೃಹ ಸಚಿವರು ಯಾವ ಹೇಳಿಕೆಯನ್ನು ಕೊಟ್ಟರು ಅದರ ಮೇಲೆ ತಮ್ಮ ಅಭಿಪ್ರಾಯ ಏನು ಎಂದು ಹೇಳಿದ್ದೀರಿ, ಅದನ್ನು ನಾನು ತಮ್ಮ ಅನುಮತಿ ಸಿಕ್ಕಿದೆ ಎಂದು ಮಾತನಾಡಲು ಎದ್ದ ನಿಂತೆ. ಆದರೆ ಅಷ್ಟರಲ್ಲಿ ಮಾನ್ಯ ಕಾನೂನು ಸಚಿವರು ಇದರ ಮೇಲೆ ಕ್ರಿಯಾಲೋಪವನ್ನು ಎತ್ತಿದರು. ಆಗ ನೀವು ನನಗೆ ಮಾತನಾಡಲು ಅವಕಾಶವನ್ನು ಕೊಡಲಿಲ್ಲ. ಪಾಯಿಂಟ್ ಆಫ್ ಆರ್ಡರ್ ಇಲ್ಲ ಎಂದಿದ್ದರೆ ತಮ್ಮ ಅನುಮತಿ ಇತ್ತು ಎಂದು ನಮಗೆ ಗೊತ್ತಾಗುತ್ತದೆ.

ಅಧ್ಯಕ್ಷರು.—ನೀವಾಗಲೀ ಅಥವಾ ಬೇರೆ ಯಾರೋ ಆಗಲೀ, ಪಾಯಿಂಟ್ ಆಫ್ ಆರ್ಡರ್ ಎತ್ತಿದಾಗ ನಾನು ಅದರ ಬಗ್ಗೆ ಸ್ವಲ್ಪ ಗಮನ ಹರಿಸಿ ಮಾತನಾಡುವುದಕ್ಕೆ ಅವಕಾಶ ಕೊಡಬೇಕೋ ಬೇಡವೋ ಎಂದು ನಿರ್ಧರಿಸುತ್ತೇನೆ. ಪಾಯಿಂಟ್ ಆಫ್ ಆರ್ಡರ್ ಇಲ್ಲ ಎಂದರೆ ನನ್ನದೇನು ಅಬ್ಜಕ್ಷನ್ ಇರುವುದಿಲ್ಲ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ತಮ್ಮ ಪ್ರಕಾರ ಪಾಯಿಂಟ್ ಆಫ್ ಆರ್ಡರ್ ಇಲ್ಲದಿದ್ದರೆ ನಿಮ್ಮ ಅಬ್ಜಕ್ಷನ್ ಇದರ ಬಗ್ಗೆ ಇಲ್ಲ ಎಂದಾಯಿತಲ್ಲಾ.

(ಗೊಂದಲ)

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ, ತಾವು ಆಗಲಿಂದಲೂ ಎರಡೂ ಕಡೆಯವರ ಆರ್‌ಗ್ಯುಮೆಂಟನ್ನು ಕೇಳಿದ್ದೀರಿ, ಇದರ ಬಗ್ಗೆ ದಯವಿಟ್ಟು ಒಂದು ರೂಲಿಂಗ್‌ನ್ನು ಕೊಟ್ಟುಬಿಟ್ಟರೆ ಈ ವಿಷಯ ಬೇಗ ಮುಕ್ತಾಯವಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೇ, ನಿಮ್ಮಲ್ಲಿ ಭಿನ್ನವಿಸುವುದು ಇಷ್ಟೇ, ನನ್ನ ಮೇಲೆ ಮಾನ್ಯ ಸಚಿವರು ವೈಯಕ್ತಿಕವಾಗಿ ಆಪಾದನೆಯನ್ನು ಮಾಡಿದ್ದಾರೆ, ಅದರ ಬಗ್ಗೆ ನಾನು ವಿವರಣೆ ಕೊಡುವುದಕ್ಕೆ ತಾವು ಮೊದಲು ನನಗೆ ಅವಕಾಶವನ್ನು ಕೊಟ್ಟಿದ್ದೀರಿ. ಆದರೆ ಈಗ ಅದನ್ನು ಹೇಳುವುದಕ್ಕೆ ತಾವು ಅನುಮತಿ ಕೊಡುತ್ತಿಲ್ಲ.

ಅಧ್ಯಕ್ಷರು.—ಇದರ ಬಗ್ಗೆ ಪಾಯಿಂಟ್ ಆಫ್ ಆರ್ಡರ್ ಎತ್ತಿದ ಮೇಲೆ ನಾನು ಸರಿಯಾಗಿ ರೂಲ್ಸ್ ರೆಗ್ಯುಲೇಷನ್ ನೋಡಿ, ಆಮೇಲೆ ಅವಕಾಶ ಕೊಡಬೇಕಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ನಾನು ಮೊದಲು ವಿವರಣೆ ಕೊಡುವುದಕ್ಕೆ ಎದ್ದು ನಿಂತಾಗ ತಾವು ಸುಮ್ಮನೆ ಇದ್ದೀರಿ. ಅದನ್ನು ನೋಡಿ ನಾನು ನಿಮ್ಮ ಅನುಮತಿ ಇದೆ ಎಂದು ತಿಳಿದುಕೊಂಡು ಮಾತನಾಡುವುದಕ್ಕೆ ಪ್ರಾರಂಭ ಮಾಡಿದೆ. ಆ ಕಡೆಯವರು ಇದರ ಬಗ್ಗೆ ಕ್ರಿಯಾಲೋಪ ಎತ್ತದೆ ಇದ್ದಿದ್ದರೆ, ನಾನು ವಿವರಣೆ ಕೊಡುವುದಕ್ಕೆ ತಮ್ಮ ಅನುಮತಿ ಇತ್ತು ಅಥವಾ ಇದರ ಬಗ್ಗೆ ಭಿನ್ನಾಭಿಪ್ರಾಯ ತಮ್ಮಲ್ಲಿ ಇರಲಿಲ್ಲ. ಯಾವುದಾದರೂ ಹೇಳಿಕೆಯನ್ನು ಸದನದಲ್ಲಿ ಓದಬೇಕಾದರೆ ಅದನ್ನು ಪೂರ್ವಭಾವಿಯಾಗಿ ಲಿಖಿತ ಮೂಲಕ ಅಧ್ಯಕ್ಷರಿಗೆ ಕೊಡಬೇಕೆಂದು ಯಾವ ಒಂದು ಬುಲೆಟಿನ್ ಹೊರಡಿಸಿದ್ದೀರಿ. ಈ ಬುಲೆಟಿನ್ ನಿಯಮಾವಳಿಗಳಿಗೆ ವಿರುದ್ಧವಾಗಿದೆ. ಒಂದು ವೇಳೆ ನಾನು ಪೂರ್ವಭಾವಿಯಾಗಿ ಲಿಖಿತ ಮೂಲಕ ಕೊಟ್ಟಿದ್ದರೆ, ಇಂದು ಚರ್ಚೆಗೆ ಈ ವಿಷಯ ಬರುತ್ತಿತ್ತೋ ಇಲ್ಲವೋ ? ಈಗಲೇ ನನಗೆ ಅವಕಾಶ ಕೊಟ್ಟರೆ ನಾನು ಹೇಳಿಕೆಯನ್ನು ಸದನದಲ್ಲಿ ಕೊಡುತ್ತೇನೆ. ಸಿರಿಯೇನೇ ನಿಯಮಾವಳಿ ಪ್ರಕಾರ ಪೂರ್ವಭಾಗಿಯಾಗಿಯೇ ಕೊಡಬೇಕೆಂದು ಏನು ಇಲ್ಲ. ತಾವು ಇದನ್ನು ಮತ್ತೊಮ್ಮೆ ನೋಡಬೇಕು. ಈ ವಿಷಯದ ಗಹನತೆ ಬಗ್ಗೆ ತಾವು ಗಮನ ಹರಿಸಬೇಕು.

ಅಧ್ಯಕ್ಷರು.—ಬಂಗಾರಪ್ಪನವರೇ, ದಯವಿಟ್ಟು ಬೇಗ ಮುಕ್ತಾಯ ಮಾಡಿ.

ಶ್ರೀ ಎಸ್. ಬಂಗಾರಪ್ಪ.—ಈ ವಿಷಯದ ಗಹನತೆ ಬಗ್ಗೆ ವಿಚಾರ ಮಾಡಿ ಎಂದು ಮತ್ತೆ ನಾನು ಕೇಳಿಕೊಳ್ಳುತ್ತೇನೆ. ಕೆಲವು ಸಾರಿ ಇಂತಹ ವಿಷಯಗಳು ಸತ್ಯವಾಗಿರುತ್ತವೋ, ಅಸತ್ಯವಾಗಿರುತ್ತವೋ ಅದರ ಮೆರಿಟ್ಸ್‌ಗೆ ಜನರು ಹೋಗದೆ ಇದಕ್ಕೆ ಬೇಕಾದಷ್ಟು ಪ್ರಚಾರ ಸಿಕ್ಕಿ ತನ್ನ ಗಹನತೆಯನ್ನು ತಾವು ಪಡೆದು ಬಿಡುತ್ತೇವೆ. ಇದರಲ್ಲಿ ಸತ್ಯ ಇದೆಯೋ, ಸತ್ವ ಇದೆಯೋ ಎಂಬುದನ್ನು ತಾವು ಯೋಚನೆ ಮಾಡಬೇಕು. ಈ ವಿಷಯ ರಾಜಕೀಯವಾಗಿ ಪ್ರಚಾರ ಸಿಕ್ಕಿ ಒಬ್ಬ ವ್ಯಕ್ತಿಯ ಅಂದರೆ ನನ್ನ ವೈಯಕ್ತಿಕ ನಿಂದನೆ ಮಾಡತಕ್ಕ ಚಾರಿತ್ರ್ಯ ವಧೆ ಮಾಡತಕ್ಕ ವಿಷಯಕ್ಕೆ ಹೋಗುತ್ತದೆ. ಇದು ಬಹಳ ಪ್ರಾಮುಖ್ಯವಾದ ವಿಚಾರ. ಆದುದರಿಂದ ಇದಕ್ಕೆ ಯಾವುದೇ ಆಡೆತಡೆಗಳನ್ನು ಒಡ್ಡದೆ, ತಮ್ಮದೇ ಆದ ವಿಧಿನಿಯಮಗಳನ್ನು ಅಡ್ಡ ತರದೇ, ಯಾವುದೇ ನಿಮ್ಮ ಪರತತ್ವಗಳನ್ನು ಹಾಕದೆ ನಾನು ನನ್ನ ವೈಯಕ್ತಿಕ ವಿವರಣೆಗಳನ್ನು ಕೊಡುವುದಕ್ಕೆ ಅವಕಾಶ ಮಾಡಿಕೊಡಬೇಕು. ತಾವು ನಮ್ಮ ಹಕ್ಕನ್ನು ಕಾಯಿದೆ ಇದ್ದರೆ, ನಮಗೆ ರಕ್ಷಣೆ ಕೊಡದೇ ಇದ್ದರೆ, ನಾವುಗಳು ಈ ಸದನದಲ್ಲಿ ಕೆಲಸ ಮಾಡುವುದಕ್ಕಾಗುವುದಿಲ್ಲ. ಇವತ್ತು ನಾನು ಇರಬಹುದು, ನಾಳೆ ಬೇರೆಯವರು ಇರಬಹುದು. ಅಥವಾ ನಾಳೆ ಇದೇ ಪರಿಸ್ಥಿತಿ ಅವರಿಗೂ ಬಂದೀತು. ಆ ದೃಷ್ಟಿಯಿಂದ ನಮ್ಮ ಹಕ್ಕನ್ನು ಸಂಪೂರ್ಣವಾಗಿ ಕಾಯುಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ನೀವು ನನಗೆ ಅವಕಾಶ ಕೊಡದೇ ಹೋದರೆ ಸದನದ ಸದಸ್ಯರುಗಳ ಹಕ್ಕನ್ನು ಗಾಳಿಗೆ ತೂರಿದಂತಾಗುತ್ತದೆ. ದಯವಿಟ್ಟು ಅದಕ್ಕೆ ಅವಕಾಶ ಕೊಡದೆ ನಮ್ಮ ಹಕ್ಕನ್ನು ಸಂಪೂರ್ಣವಾಗಿ ಕಾಪಾಡಬೇಕು. ನಮ್ಮ ಹಕ್ಕನ್ನು ಚಲಾವಣೆ ಮಾಡುವುದಕ್ಕೆ ಸದವಕಾಶ ಮಾಡಿಕೊಡಬೇಕೆಂದು ಬರತಕ್ಕ ದಿನಗಳಲ್ಲಿ ಇಂಥ ಸಂದರ್ಭಗಳು ಬಂದಾಗ ಏನು ಮಾಡಬೇಕು

ಎನ್ನುವ ಬಗ್ಗೆ ಒಂದು ಒಳ್ಳೆಯ ಸಂಪ್ರದಾಯವನ್ನು ಹಾಕಿ ನನಗೆ ಮಾತನಾಡಲು ಅವಕಾಶ ಕೊಡುವುದರ ಮೂಲಕ ಮಾಡಬೇಕೆಂದು ಹೇಳುತ್ತೇನೆ. ಬರವಣಿಗೆಯ ಮೂಲಕ ಮೊದಲೇ ಕೊಟ್ಟಿಲ್ಲ ಎನ್ನುವ ಒಂದೇ ಕಾರಣದ ಮೇಲೆ ನಮ್ಮ ಹಕ್ಕನ್ನು ರಕ್ಷಣೆ ಮಾಡುವಲ್ಲಿ ವಿಫಲರಾದರೆ ಸದನದಲ್ಲಿ ಸದಸ್ಯರಿಗೆ ಇರುವ ರಾಜ್ಯಾಂಗಬದ್ಧವಾದ ಹಕ್ಕನ್ನು ಪುಂಠಿದಂತಾಗುತ್ತದೆಂದು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಅಧ್ಯಕ್ಷರು. —ವಿಧಾನ ಸಭೆಯಲ್ಲಾಗಲೀ, ಪಾರ್ಲಿಮೆಂಟಿನಲ್ಲಾಗಲೀ, ಯಾವುದೇ ಒಬ್ಬ ಮಾನ್ಯ ಸದಸ್ಯರ ವಿರುದ್ಧ ಯಾವುದೇ ಒಂದು ಆಪಾದನೆ ಬಂತು ಎಂದರೆ ಆದನ್ನು ಅಲ್ಲಗಳೆಯುವುದಕ್ಕೆ ಮತ್ತು ಎಕ್ಸ್‌ಪ್ಲನೇಷನ್ ಕೊಡುವುದಕ್ಕೆ ಪ್ರತಿಯೊಬ್ಬ ಮಾನ್ಯ ಸದಸ್ಯರಿಗೂ ಹಕ್ಕು ಇರುತ್ತದೆ. ಹಾಗೂ ವಿವರಣೆ ಕೊಡುವುದು ಅವರ ಕರ್ತವ್ಯವೂ ಆಗಿರುತ್ತದೆ ಎನ್ನುವುದನ್ನು ನಾನು ಅರಿತಿದ್ದೇನೆ. ಆ ಪ್ರಕಾರ ಪಾರ್ಲಿಮೆಂಟ್ ಇರಲಿ, ಅಸೆಂಬ್ಲಿ ಇರಲಿ ಪರ್ಸನಲ್ ಎಕ್ಸ್‌ಪ್ಲನೇಷನ್‌ಗೆ ಅವಕಾಶ ಕೊಡಲೇಬೇಕಾಗುತ್ತದೆ. ಆ ರೀತಿ ಕೊಟ್ಟಂಥ ಉದಾಹರಣೆಗಳು ಸಾಕಷ್ಟು ಇವೆ. ನಮ್ಮ ಸದನದಲ್ಲೂ ಕೂಡ ಬೇಕಾದಷ್ಟು ಮಾನ್ಯ ಸದಸ್ಯರು ಆಗಿದಾಗ್ಗೆ ಕೊಡುತ್ತಿರುತ್ತಾರೆ. ಅದೂ ಅಲ್ಲದೇ ನಾನು ಕಂಡಿರುವ ಹಾಗೆ ಈ ಸದನದಲ್ಲಿ ಕೂಡ ಅನೇಕ ಮಾನ್ಯ ಸದಸ್ಯರು ಮತ್ತು ಮಂತ್ರಿಗಳು ಆಗಿಂದಾಗ್ಗೆ ವಿವರಣೆಯನ್ನು ಕೊಡುತ್ತಲೇ ಇರುತ್ತಾರೆ. On the spot ವಿವರಣೆಯನ್ನು ಕೊಟ್ಟಿದ್ದಾರೆ. ಮಾನ್ಯ ಸಚಿವರು ಸ್ಟೇಟ್‌ಮೆಂಟ್ ಓದಿದಾಗ ಮಾನ್ಯ ಬಂಗಾರಪ್ಪನವರು ಸದನದಲ್ಲಿ ಇರಲಿಲ್ಲ. ಇದ್ದಿದ್ದರೆ, ಆಗಲೇ ಪರ್ಸನಲ್ ಎಕ್ಸ್‌ಪ್ಲನೇಷನ್‌ಗೆ ಅವಕಾಶ ಮಾಡಿಕೊಡುತ್ತಿದ್ದೆ. ದುರದೃವ, ಆವತ್ತಿನ ದಿವಸ ಅವರು ಇರಲಿಲ್ಲ. ಸ್ಟೇಟ್‌ಮೆಂಟಿನಲ್ಲಿ ನಂದಕುಮಾರ್‌ರವರ ಬಗ್ಗೆ ಮಾತ್ರ ಓದಿ ಹೇಳಿದ್ದಾರೆ. ಇದರ ಬಗ್ಗೆ ಪರ್ಸನಲ್ ಎಕ್ಸ್‌ಪ್ಲನೇಷನ್ ಕೊಡಬೇಕೇ ಬೇಡವೇ ಎಂಬ ಬಗ್ಗೆ ಪಾರ್ಲಿಮೆಂಟರಿ ರೂಲ್ಸ್ ರೆಗ್ಯುಲೇಷನ್‌ಗಳನ್ನು ಓದಿದ್ದೇನೆ. ಆ ಪ್ರಕಾರ ಮಾನ್ಯ ಬಂಗಾರಪ್ಪನವರು ಇದ್ದಿದ್ದರೆ, ಸ್ಟೇಟ್‌ಮೆಂಟ್ ಕೊಡುತ್ತಿದ್ದರು. ಆದರೆ ಅವರು ಇರಲಿಲ್ಲ. ರೂಲ್ಸ್ ಆಫ್ ಪ್ರೊಸೀಜರ್ ಪ್ರಕಾರ ಅಂದರೆ ರೂಲ್ಸ್ ೩೧೫ರಲ್ಲಿ ಏನು ಹೇಳಿದೆ ಎಂದರೆ,

> "A member may, with the permission of the Speaker make a personal explanation although there is no question before the House, but in this case no debatable matter may be brought forward, and no debate shall arise."

ಇದು ರೂಲ್ ೩೧೫ರಲ್ಲಿ ಹೀಗೆ ಹೇಳಿದೆ. ಅದೇ ಪಾರ್ಲಿಮೆಂಟರಿ ರೂಲ್ಸ್ ೩೫೭ರಲ್ಲಿ ಏನು ಹೇಳಿದೆ ಎಂದರೆ, ಯಾಜರು ಇದ್ದ ಸದಸ್ಯರಿಗೆ ವಿವರಣೆಯನ್ನು ಕೊಡುವುದಕ್ಕೆ ಅವಕಾಶ ಇದೆ. ಅದು ಸಂಪ್ರದಾಯ.

ಶ್ರೀ ಎಂ. ವೀರಪ್ಪಮೊಯಿಲಿ.—ಎಂದು ದಿನವೂ ಸಹ ಎಕ್ಸ್‌ಪ್ಲನೇಷನ್ ಕೊಡುವುದಕ್ಕೆ ಅವಕಾಶ ಇದೆ.

(ಗೊಂದಲ)

ಅಧ್ಯಕ್ಷರು.—ನನ್ನ ಅಭಿಪ್ರಾಯ ಹೇಳಬೇಕೋ ಬೇಡವೋ ?

(ಗೊಂದಲ)

ಶ್ರೀ ಎಂ. ವೀರಪ್ಪಮೊಯಿಲಿ.—ಸದಸ್ಯರು ಆ ದಿನ ಸದನದಲ್ಲಿ ಹಾಜರು ಇಲ್ಲದಿದ್ದರೆ ಮರುದಿನ ಅವರಿಗೆ ವಿವರಣೆಯನ್ನು ನೀಡುವುದಕ್ಕೆ ಅವಕಾಶ ಕೊಡಬೇಕು.

ಅಧ್ಯಕ್ಷರು.—ನಾನು ಹೇಳುವುದನ್ನು ಪೂರಾ ಕೇಳಿ, ಆಮೇಲೆ ರೂಲಿಂಗ್ ಕೊಡುತ್ತೇನೆ.

೭-೦೦ ಪಿ. ಎಂ.

ಅಧ್ಯಕ್ಷರು.—ನಾನು ನನ್ನ ಅಭಿಪ್ರಾಯವನ್ನು ಹೇಳಬೇಕೋ ಬೇಡವೋ ? ತಾವುಗಳು ಎಲ್ಲರೂ ದಯವಿಟ್ಟು ಕಂಳಿತುಕೊಳ್ಳಬೇಕು.—

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯ್ಲಿ.—ಮರುದಿವಸ ಕೂಡಾ...

(ಗೊಂದಲ)

ಅಧ್ಯಕ್ಷರು.—ತಮಗೆ ಅವಕಾಶವನ್ನು ಕೊಡುತ್ತೇನೆ. ಎಲ್ಲರೂ ಹೀಗೆ ಎದ್ದುನಿಂತು ಮಾತ ನಾಡಿದರೆ ಹೇಗೆ ? ನಾನು ಪ್ರಿಯೂಂಬಲ್ ಹೇಳ ಬೇಕೋ ಬೇಡವೊ ?

ಶ್ರೀ ಎಂ. ವೀರಪ್ಪ ಮೊಯ್ಲಿ.—ಅವರು ಮರುದಿವಸ ಬಂದು ಕೊಟ್ಟಿದ್ದಾರೆ.

ಅಧ್ಯಕ್ಷರು.—ಪಾರ್ಲಿಮೆಂಟರಿ ಪ್ರೊಸೀಜರ್‌ನ್ನು ನಾನು ಓದಿದ್ದೇನೆ. ರೂಲ್ ೩೫೭...

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಮೊಯ್ಲಿಯವರು ಹೇಳಿರತಕ್ಕಂಥದ್ದು ಮಾನ್ಯ ವೈ. ಕೆ ರಾಮಯ್ಯನವರು ಅವೊತ್ತು ಇರಲಿಲ್ಲ, ಮರುದಿವಸ ಕೊಟ್ಟಿಲ್ಲ.

ಅಧ್ಯಕ್ಷರು.—ಅದು ನನಗೆ ನೆನಪು ಆಗಿಲ್ಲ. ಒಟ್ಟಿನಲ್ಲಿ ಅವರು ಎಕ್ಸ್‌ಪ್ಲನೇಶನ್ ಕೊಟ್ಟಿದ್ದು, ಮಾನ್ಯ ರಾಮಯ್ಯನವರು ಮಾನ್ಯ ನಜೀರ್‌ಸಾಬ್‌ರವರು ಕೊಟ್ಟಿದ್ದು ನೆನಪು ಇದೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ನಜೀರ್‌ಸಾಬ್‌ರವರು ಅವೊತ್ತೆ ಕೊಟ್ಟಿದ್ದಾರೆ. ವೈ. ಕೆ. ರಾಮಯ್ಯನವರು ಮರುದಿವಸ ಕೊಟ್ಟಿರತಕ್ಕಂಥಾದ್ದು. ಅದು ದಾಖಲೆಯಲ್ಲಿದೆ.

ಅಧ್ಯಕ್ಷರು.—ಆ ಮೇಲೆ ನನಗನ್ನಿಸಿದ್ದು, ರೂಲ್ ೩೫೭ರ ಮೇಲೆ, ನಮ್ಮಲ್ಲಿ ಯಾವ ಬುಕ್ ಇಲ್ಲ. ನಮ್ಮ ರಾಜ್ಯದ ರೂಲ್ಸ್ ಏನಿವೆ. ಅದರ ಬಗ್ಗೆ ಮಾತ್ರ ಇದ್ದು ನಿಯಮ ೩೫೭ರ ಬಗ್ಗೆ ಇಲ್ಲ. ಈ ನಿಯಮ ೩೫೭ರ ಬಗ್ಗೆ ಏನಾದರೂ ರೂಲಿಂಗ್ ಇದೆಯೋ ಏನೋ ಎಂದು ಈ ಕೌಲ್ ಮತ್ತು ಶಕ್‌ದರ್ ಅವರ ಬುಕ್‌ನ್ನು ನೋಡಿದ್ದೇನೆ. ಇದರಲ್ಲಿ ಪೇಜ್‌ನಂಬರ್ ೩೪೨ರ ಲಾಸ್ಟ್ ಪ್ಯಾರಾದಲ್ಲಿ ಏನು ಹೇಳುತ್ತಾರೆ. ಅಂದರೆ

> "When the member in question does not wish to make a personal explanation on the spot or if he is not present at that time in the House, he is allowed to make a statement later on. In this case the member seeking permission for a personal explanation either places personaly the facts before the speaker in his Chamber or makes a written request to him enclosing a copy of the statement to be made by him by way of proposed explantion or a gist thereof. The advance copy of the statement is examined and with a view to seeing that it is brief and concise and does not introduce any further controversial or debatable matter. ಮುಂದೆ ಏನಿದೆ ಎಂದರೆ If any portion thereof is considertd objectionable or beyond the scope of personal explantion, the member is asked to delete it, before permission to make the statement is granted. The copy is to be submitted to the Speaker sufficiently in advance, for his approval.
>
> If the permission has been granted, the member makes the statement in the House on the date and time fixed by the Speaker, and the Minister or the member who is alleged to have been made the charges is accordingly informed as to when the statement would be made." ಆಮೇಲೆ ಈ ಪುಸ್ತಕದ ಕೆಳಗಡೆ ಏನು ಹೇಳಿಬಿಟ್ಟೆ ಎಂದರೆ

(1. For instance of personal explanation, fee LS Deb , II 7-9-55, cc. 12577-78, L. S., Deb., 21-8-1963 cc. 1825-30, 12-2-1964, cc. 300-03, 2-12-1966, etc.etc."
ಈ ತರಹ ಹೀಗಿದೆ

(ಗೊಂದಲ)

SRI M. VEERAPPAMOILY.—It is not a ruling.

(ಗೊಂದಲ)

ಅಧ್ಯಕ್ಷರು.—ದಯವಿಟ್ಟು ಮಾನ್ಯ ಸದಸ್ಯರುಗಳು ಸ್ವಲ್ಪ ಕೇಳಬೇಕು. ನಾನೂ ಕಾನೂನಿನ ಪದವೀಧರ, ನಾನೂ ಕೋರ್ಟ್‌ನಲ್ಲಿ ವಕಾಲತ್ತು ಮಾಡಿ ಬಂದಿದ್ದೇನೆ. ನನಗೂ ರೂಲ್ಸ್ ರೆಗ್ಯುಲೇಷನ್ಸ್ ಹೇಗೆ ನೋಡಬೇಕೆಂದು ಗೊತ್ತಿದೆ. ಒಂದು ವೇಳೆ ನನ್ನ ಆನಿಸಿಕೆ ತಪ್ಪು ಇರಬಹುದು, ಒಪ್ಪು ಇರಬಹುದು, ಅದು ನಿಮಗೆ, ಈ ಸದನಕ್ಕೆ ಬಿಟ್ಟದ್ದು. ನಾನಿಂ ಈಗ ನನ್ನ ಅಭಿಪ್ರಾಯವನ್ನು ಹೇಳಬೇಕೋ ಬೇಡವೋ ? ಆ ಒಂದಂ ದೃಷ್ಟಿಯಿಂದ ನಾನು ಏನಂ ಮಾಡಿದ್ದೇನೆ ಅಂದರೆ, ಈ ರೂಲ್ಸ್ ಏನಂ ಇದೆ ಅಂದರೆ, ರೂಲ್ ೩೧೫ರಲ್ಲಿ ಎಂಬಿಗ್ವಿಟಿ ಇರುವುದು ನನಗೆ ಕಂಡುಬಂದುದರಿಂದ, ಏಕೆಂದರೆ ಇದಂ ಆಪೊತ್ತಿನದೋ ಅಥವಾ ಮರುದಿವಸದೋ ಏನೋ ನನಗೆ ಗೊತ್ತಿಲ್ಲ, ಅದಕ್ಕಾಗಿ ನಾನಂ ಏನು ಮಾಡಿದೆ ರೂಲ್ಸ್ ೩೧೬ರಲ್ಲಿ ಏನು ಇದೆ. ರೆಸ್ಯೂಜರಿ ಪವರ್ ಇದೆ.

> "All matters not specifically provided for these rulas and all questions relating to the detailed working to these rules shall be regulated in such manner as the Speaker may from time to time direct."

ಎಂದು ಇದೆ. ಅದಕ್ಕೋಸ್ಕರವಾಗಿ ನಾನಂ ಏನಂ ಮಾಡಿದ್ದೇನೆ ಅಂದರೆ, ಬಂಗಾರಪ್ಪನವರಂ ಬರಂತಾ ಇದ್ದಾರೆ, ಅವರಿಗೆ ಸ್ಟೇಟ್‌ಮೆಂಟ್ ಕೊಡಬೇಕಾಗುತ್ತದೆ, ಅವರಿಗೂ ಅನುಕೂಲ ಮಾಡಿದ ಹಾಗೆ ಆಯಿತಂ ಮತ್ತಂ ಮಂಂದಕ್ಕೂ ಸಹ ಒಂದಂ ದಾರಿ ಮಾಡಿದ್ದಹಾಗೆ ಆಯಿತಂ, ಹಾಗೆಯೇ ಎಲ್ಲರಿಗೂ ಅನುಕೂಲವಾಗುವ ದೃಷ್ಟಿಯಿಂದ ನಾನು ಏನು ಮಾಡಿದೆ ಅಂದರೆ ಒಂದ ೇಫ್ಲು ಪ್ರಕಟಣೆಯನ್ನು ಹೊರಡಿಸಿದ್ದೇನೆ. ಅದರ ವಿಷಯ ಏನೆಂದರೆ, ಸದಸ್ಯರಂ ವೈಯಕ್ತಿಕ ವಿವರಣೆಯನ್ನು ಸಭೆಯಲ್ಲಿ ನೀಡುವ ಕಾರ್ಯವಿಧಾನದ ಬಗ್ಗೆ ಅಧ್ಯಕ್ಷರ ಆದೇಶ. ಅದರ ಪೂರ್ಣ ವಿವರ ಹೀಗೆ ಇದೆ. "ಸದಸ್ಯರಂ ವೈಯಕ್ತಿಕ ವಿವರಣೆಯನ್ನು ಸಭೆಯಲ್ಲಿ ನೀಡಲು ಅವಕಾಶ ಕಲ್ಪಿಸಿರಂವ ಕರ್ನಾಟಕ ವಿಧಾನ ಸಭೆಯಂ ಕಾರ್ಯವಿಧಾನ ಹಾಗೂ ನಡವಳಿಕೆಯ ೩೧೫ನೇ ನಿಯಮಂಕ್ಕೆ ಮಾನ್ಯ ಸದಸ್ಯರ ಗಮನವನ್ನು ಕೋರಲಾಗಿದೆ. ಈ ಸಂಬಂಧದಲ್ಲಿ ಸದಸ್ಯರಂ ವೈಯಕ್ತಿಕ ವಿವರಣೆಯನ್ನು ಕೊಡುವ ಬಗ್ಗೆ ಈ ಕೆಳಕಂಡ ಕಾರ್ಯವಿಧಾನವನ್ನು ಮಾನ್ಯ ಸಭಾಧ್ಯಕ್ಷರು ಗೊತ್ತುಪಡಿಸಿದ್ದಾರೆ.

ಒಬ್ಬ ಸದಸ್ಯರ ಮೇಲೆ ವೈಯಂಕ್ತಿಕವಾದಂಥ ಟೀಕೆ ಅಥವಾ ಆರೋಪಗಳನ್ನು ಸದನದಲ್ಲಿ ಮಾಡಿದರೆ, ಅಂಥ ಸದಸ್ಯರು ಅಧ್ಯಕ್ಷರ ಅನುಮತಿಯನ್ನು ಪಡೆದು ವೈಯಂಕ್ತಿಕ ವಿವರಣೆಯನ್ನು ಸದನದಲ್ಲಿ ನೀಡಬಹುದು. ಅಂತಹ ವಿವರಣೆಯಂ ಸಂಕ್ಷಿಪ್ತವಾಗಿರಬೇಕಂ ಹಾಗೂ ಚರ್ಚಾಸ್ಪದವಾಗಂವ ವಿಷಯಂಗಳನ್ನು ಹೊಂದಿರ ಬಾರದು.

ಆಪಾದನೆಯನ್ನು ಮಾಡಿದಾಗ ಸದಸ್ಯರು ಸಭೆಯಲ್ಲಿ ಹಾಜರಿದ್ದರೆ ಅಂತಹ ಸದಸ್ಯರಂ, ಆಪಾದನೆ ಮಾಡಿದ ಸದಸ್ಯರ, ಮಂತ್ರಿಯವರ ಭಾಷಣ ಮುಂಗಿದ ನಂತರ ವೈಯಂಕ್ತಿಕ ವಿವರಣೆಯನ್ನು ನೀಡಲು ಅನುಮತಿಯನ್ನು ನೀಡಲಾಗುವುದು.

ಆಪಾದನೆಗಳನ್ನು ಮಾಡಿದ ಸಮಯದಲ್ಲಿ ಹಾಜರಿರದ ಸದಸ್ಯರಂ, ವೈಯಕ್ತಿಕ ವಿವರಣೆಯನ್ನು ನೀಡಬಯಸಿದಲ್ಲಿ ಅಧ್ಯಕ್ಷರ ಅನುಮತಿಯನ್ನು ಲಿಖಿತ ಮೂಲಕ ಕೋರಬೇಕು ಮತ್ತು ಅವರು ನೀಡಬಯಸುವ ವಿವರಣೆಯಂ ಒಂದು ಪ್ರತಿಯನ್ನು ಲಗತ್ತಿಸಬೇಕಂ. ಅಧ್ಯಕ್ಷರು ಅನುಮತಿಯನ್ನು

ನೀಡಿದಲ್ಲಿ ಸದಸ್ಯರು, ಪ್ರಶ್ನೆಗಳ ಕಾಲ ಮುಗಿದ ನಂತರ ಹಾಗೂ ದಿನದ ಇತರ ಕಾರ್ಯಕಲಾಪಗಳನ್ನು ಪ್ರಾರಂಭಿಸುವ ಮುನ್ನ ವೈಯಕ್ತಿಕ ವಿವರಣೆಯನ್ನು ನೀಡಬಹುದು.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯ್ಲಿ.—ಅಧ್ಯಕ್ಷರೆ, ಮೇಲೆ ತಕ್ಕಡಿ ಹೆಚ್ಚು ಕಡಿಮೆ ಆಗಿದೆ.....

(ಗೊಂದಲ)

ಅಧ್ಯಕ್ಷರು.—ಆಪಾದನೆಯನ್ನು ಮಾಡಿದಾಗ .....ದಯವಿಟ್ಟು ಎಲ್ಲರೂ ಕುಳಿತುಕೊಳ್ಳಬೇಕು. ನನಗೆ ರೂಲಿಂಗ್ ಮಾಡುವುದಕ್ಕೆ ನೀವುಗಳು ಅವಕಾಶವನ್ನು ಮಾಡುವುದಿಲ್ಲ, ಇದು ಸರಿಯಲ್ಲ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಅದಕ್ಕೆ ಈ ಸರ್‌ಕ್ಯೂಲರ್ ಏನು ಇದೆ.....

(ಗೊಂದಲ)

ಅಧ್ಯಕ್ಷರು.—ನಾನು ರೂಲಿಂಗ್ ಕೊಡುತ್ತಾ ಇದ್ದೇನೆ..... ದಯವಾಡಿ ಎಲ್ಲರೂ ಕುಳಿತು ಕೊಳ್ಳಬೇಕು.....ಅದು ನಿಮಗೆ ತಪ್ಪು ಇರಬಹುದು, ಒಪ್ಪು ಇರಬಹುದು.

SRI MALLIKARJUN M. KHARGE.—I have raised a point of order. You have to withdraw that Bulletin.

ಅಧ್ಯಕ್ಷರು.—ದಯವಿಟ್ಟು ಸ್ವಲ್ಪ ಕೇಳಿ. ನಾನು ನನ್ನ ಮಾತನ್ನು ಮುಗಿಸುತ್ತೇನೆ. ಮುಂದೆ ಏನಾಯಿತು ಅಂದರೆ ಬಂಗಾರಪ್ಪನವರು ನಿನ್ನೆ ಬಂದ ತಕ್ಷಣ, ನಾನು ಆಪ್ತೂತ್ತು ಎಕ್ಸ್‌ಪೆಕ್ಟ್ ಮಾಡಿದ್ದೆ ಆವಾಗ ಅವರು ಇದನ್ನು ಕೊಡುತ್ತಾರೆ, ಅವರು ಕೊಟ್ಟರೆ ಅವರಿಗೆ ಅವಕಾಶವನ್ನು ಮಾಡಿಕೊಡ ಬೇಕೆನ್ನುವ ಉದ್ದೇಶವು ನನ್ನದಾಗಿತ್ತು. ಅವರಿಗೆ ಅವಕಾಶವನ್ನು ಮಾಡಿಕೊಡಬಾರದು ಎನ್ನುವ ಉದ್ದೇಶ ಖಂಡಿತಾ ನನ್ನಲ್ಲಿ ಇದ್ದಿಲ್ಲ. ಅವರಿಗೆ ಅವಕಾಶವನ್ನು ಕೊಡಬೇಕೆಂದು ಉದ್ದೇಶ ಇದ್ದರೂ, ಒಂದು ಚೌಕಟ್ಟಿನಲ್ಲಿ ಕೊಡಬೇಕೆಂದು ಇರುವುದರಿಂದ ನಾನು ಬಂಗಾರಪ್ಪನವರಿಗೆ ಏನು ಹೇಳಿದ್ದೆ ಅಂದರೆ, ಬಂಗಾರಪ್ಪನವರೆ ಇದನ್ನು ಕೊಟ್ಟಿದ್ದೀರಿ. ಈ ರೂಲ್ಸ್ ಏನು ಇದೆ ಡಿಬೇಟಬಲ್ ಎಂದು ಇದೆ, ಈ ಡಿಬೇಟಬಲ್ ಎಂದು ಹಾಕಲಿಕ್ಕೆ ಕಾರಣ ಏನು ಅಂದರೆ ಅಕಸ್ಮಾತ್ತಾಗಿ ಡಿಬೇಟ್ ಇದೆಯೋ ಇಲ್ಲವೊ ಎಂದು ಹೇಳಿ ನೋಡುವ ಅಧಿಕಾರ ನನಗೆ ಇದ್ದುದರಿಂದ ಈ ಕಾಪಿಯನ್ನು ಸದುದ್ದೇಶದಿಂದ ಕೂಡ ಕಳುಹಿಸಬೇಕು ಎಂದು ಇದೆ ಎಂದು ನನ್ನ ನಂಬಿಕೆ. ಆದುದರಿಂದ ಪ್ರತಿಯೊಬ್ಬರಿಗೂ ಹಕ್ಕು ಇದೆ. ತಮ್ಮ ಮೇಲಿನ ಆಪಾದನೆಗಳನ್ನು ಅಲ್ಲಗಳೆಯುವುದಕ್ಕೆ ಸಂಪೂರ್ಣ ಹಕ್ಕು ಇದೆ. ಆ ಮೇಲೆ ಆಪ್ತೂತ್ತೆ, ಇತ್ತು ಅಂದರೆ ಅವಕಾಶ ಕೊಡುತ್ತಾ ಇದ್ದೆ. ಆಪ್ತೂತ್ತು ಇಲ್ಲದಿದ್ದುದರಿಂದ ಒಂದನೇ ತಾರೀಖಿಗೆ ಸ್ಟೇಟ್‌ಮೆಂಟ್ ಆಗಿರುವುದರಿಂದ, ಒಂದನೇ ತಾರೀಖಿಗೆ ಅವರು ಗೈರುಹಾಜರು ಇದ್ದುದ ರಿಂದ ಇವರು ಬೆಳಿಗ್ಗೆ ಕೊಟ್ಟಿದ್ದರೆ ಬೆಳಿಗ್ಗೆನೆ ಅವಕಾಶವನ್ನು ಮಾಡಿಕೊಡುತ್ತಾ ಇದ್ದೆ.

(ಗೊಂದಲ)

ಅಧ್ಯಕ್ಷರು.—ಡೇಟ್ ಮತ್ತು ಟೈಮ್ ಪ್ರಕಾರ ನಾನು ನಡೆಯ ಬೇಕಾಗುತ್ತದೆ.

(ಗೊಂದಲ)

ಅಧ್ಯಕ್ಷರು.—ಇವರು ಕಾಪಿ ಎನ್‌ಕ್ಲೋಸ್ ಮಾಡಿಲ್ಲ. ಅವರು ಕಾಪಿ ಎನ್‌ಕ್ಲೋಸ್ ಮಾಡಿ ಕೊಡಲಿ ನಾನು ಕೃಷ್ಣನ್ ಅವರ್ ಆದ ತಕ್ಷಣ ಮುಂದಿನ ಕಾರ್ಯಕಲಾಪ ಆಗುವ ಮುನ್ನ ಅವಕಾಶ ಮಾಡಿಕೊಡುತ್ತೇನೆ. ಅವರು ಲೆಟರ್ ಜೊತೆಗೆ ಒಂದು ಕಾಪಿಯನ್ನು ಕೊಡಲಿ. ನಾವು ಇಲ್ಲಿಗೆ ಈ ವಿಷಯವನ್ನು ಮುಗಿಸೋಣ, ನಾಳೆ ತಪ್ಪಿಗೆ ಅವಕಾಶ ಮಾಡಿಕೊಡುತ್ತೇನೆ.

(ಗೊಂದಲ)

ಅಧ್ಯಕ್ಷರು.—ದಯವಿಟ್ಟು ಎಲ್ಲರೂ ಕುಳಿತುಕೊಳ್ಳಬೇಕು.....

(ಗೊಂದಲ)

ಅಧ್ಯಕ್ಷರು.—ಸಭೆಯನ್ನು ನಾಳೆ ಬೆಳಿಗ್ಗೆ ೧೦ ಘಂಟೆಗೆ ಮುಂದೂಡಲಾಗಿದೆ.

(ಸಭೆಯು ೭ ಘಂಟೆ ೧೨ ನಿಮಿಷಕ್ಕೆ ಮುಂಕ್ಕೂಯವಾಗಿ ಮತ್ತೆ ಪುನಃ ಬುಧವಾರ ೫ ನೇ ಮಾರ್ಚ್ ೧೯೮೬ರ ಬೆಳಿಗ್ಗೆ ೧೦ ಘಂಟೆಗೆ ಸೇರಲು ನಿರ್ಧರಿಸಲಾಯಿತು).